ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮಾರ್ಚ್ 2015 ಮಾಸ ಪತ್ರಿಕೆ

ಸಂಪುಟ : 37
ಸಂಚಿಕೆ : 6
ಪುಟ : 12
ಬೆಲೆ : ₹ 5/-




ಯುಗಾದಿ ಮಹತ್ವ 3

ಹೊಸ ವರ್ಷಕ್ಕೆ ಹತ್ತು ಸಂಕಲ್ಪಗಳು 4

ಸಂಸ್ಕೃತಿ ಮತ್ತು ಮಹಿಳೆ 9

ಸಂಘ ಶಾಖೆಯ ಆವಿಷ್ಕರ್ತ 5
ಡಾ|| ಹೆಡಗೇವಾರ್

A Journal of Karnataka State Secondary Teachers' Association

# ಸಂಪಾದಕೀಯ

ಶಿಕ್ಷಕ ಸಮಾಚಾರದ ಎಲ್ಲಾ ಚಂದಾದಾರರು, ಎಲ್ಲಾ ಶಿಕ್ಷಕರು, ಮಾಧ್ಯಮಿಕ ಶಿಕ್ಷಕ ಸಂಘದ ಎಲ್ಲಾ ಕಾರ್ಯಕರ್ತರು, ಹಾಗೂ ವಿದ್ಯಾರ್ಥಿಗಳಿಗೆ ಹೊಸ ವರ್ಷ– ಮನ್ಮಥ ಸಂವತ್ಸರ– ಹಾಗೂ ಯುಗಾದಿ ಹಬ್ಬದ ಶುಭಾಶಯಗಳು. ಹೊಸ ವರ್ಷವು ಎಲ್ಲರಲ್ಲೂ ಹೆಚ್ಚಿನ ಉತ್ಸಾಹ, ಚೈತನ್ಯ, ಹುರುಪನ್ನು ನೀಡುವಂತೆ ಮನ್ಮಥನಲ್ಲಿ ಪ್ರಾರ್ಥಿಸೋಣ. ಈ ಸಂದರ್ಭದಲ್ಲಿ ನಮ್ಮ ಕೆಲಸ ಕಾರ್ಯಗಳನ್ನು ಹೆಚ್ಚು ಶ್ರದ್ಧೆಯಿಂದ ಮಾಡುವ ಸಂಕಲ್ಪವನ್ನು ಮಾಡೋಣ. ನಾವು ಕೈಗೊಳ್ಳಬಹುದಾದ ಸಂಕಲ್ಪವೇನು? ಇದನ್ನು ಸೂಚಿಸುವ ಯುಗಾದಿ ಸಂಕಲ್ಪವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಅದು ನಮ್ಮ ಗುರಿ ಸಾಧನೆಗೆ ದಿಕ್ಸೂಚಿಯಾಗಲಿ ಎಂಬ ಆಶಯ ನಮ್ಮದು.

ಮಾರ್ಚ್, ಏಪ್ರಿಲ್ ತಿಂಗಳು ಅನೇಕ ಮಹನೀಯರನ್ನು ಸ್ಮರಿಸುವ ಕಾಲ. ಜೈನ ಧರ್ಮದ ಸ್ಥಾಪಕ ಮಹಾವೀರ ಹಾಗೂ ಅಂಬೇಡ್ಕರರು ಸದಾಕಾಲ ಸ್ಮರಣೀಯರು. ಮಹಾವೀರರು ಅಹಿಂಸಾ ಪರಮೋ ಧರ್ಮಃ ಎಂದು ಬೋಧಿಸುವುದರ ಮೂಲಕ ಜನರು ನೆಮ್ಮದಿಯ ಜೀವನ ನಡೆಸುವ ಮಾರ್ಗವನ್ನು ತೋರಿಸಿದರು. ಮನಸ್ಸಿದ್ದರೆ ಮಾರ್ಗ ಎಂಬುದನ್ನು ತಮ್ಮ ಜೀವನದಲ್ಲಿ ಸಾಧಿಸಿ ತೋರಿಸಿದವರು ಡಾ॥ ಅಂಬೇಡ್ಕರರು. ವಿದ್ಯಾಭ್ಯಾಸಕ್ಕೆ ಆರ್ಥಿಕ ಹಾಗೂ ಸಾಮಾಜಿಕ ಅಡಚಣೆಗಳು ಸಾಕಷ್ಟಿದ್ದರೂ, ಅದನ್ನೆಲ್ಲಾ ಮೆಟ್ಟಿ ನಿಂತು ಉನ್ನತ ವಿದ್ಯಾಭ್ಯಾಸ ಪಡೆದು ಸಮಾಜ, ದೇಶದ ಏಳಿಗೆಗಾಗಿ ದುಡಿದ ಧೀಮಂತರು ಡಾ॥ ಅಂಬೇಡ್ಕರ್. ಅವರ ಸಾಧನೆ, ಆದರ್ಶಗಳು ಎಲ್ಲರಿಗೂ ಪ್ರೇರಣೆ ನೀಡಲಿ ಎಂದು ಆಶಿಸೋಣ.

ಯುಗಾದಿಯಂದು ಡಾ॥ಹೆಡಗೆವಾರ್ ಅವರ ಜನ್ಮ ದಿನವೂ ಹೌದು. ಅವರನ್ನು ಸ್ಮರಿಸಲು ಈ ಸಂಚಿಕೆಯಲ್ಲಿ ಒಂದು ಲೇಖನ ಪ್ರಕಟಿಸಲಾಗಿದೆ. ಕನ್ನಡ ನಾಡು ನುಡಿಗೆ ವಚನ ಸಾಹಿತ್ಯದ ಕೊಡುಗೆ ಅಪಾರ. ವಚನಕಾರರು ವಚನಗಳ ಮೂಲಕ ಸಮಾಜ ಸುಧಾರಣೆಗೆ ಪ್ರಯತ್ನಿಸಿದರು. ಅಂತಹ ವಚನಕಾರರಲ್ಲಿ ಮಾರ್ಚ್ 25 ದೇವರ ದಾಸಿಮಯ್ಯನವರ ಜಯಂತಿಯಾದರೆ ಏಪ್ರಿಲ್ 4 ಅಕ್ಕಮಹಾದೇವಿಯವರ ಜಯಂತಿ. ಈ ಇಬ್ಬರೂ ಶ್ರೇಷ್ಠ ವಚನಕಾರರನ್ನು ಸ್ಮರಿಸಿ, ಅವರ ಆದರ್ಶಗಳು ದಾರಿದೀಪವಾಗಲಿ ಎಂದು ಆಶಿಸೋಣ. ಏಪ್ರಿಲ್ 1 ರಂದು ಕಾರ್ನಾಡ್ ಸದಾಶಿವರಾವ್ ಜನ್ಮ ದಿನ. ಏಪ್ರಿಲ್ 11 ಮತ್ತು 17ರಂದು ಕ್ರಮವಾಗಿ ಜ್ಯೋತಿರಾವ್ ಫುಲೆ ಮತ್ತು ದಾಮೋದರ್ ಛಾಪೇಕರ್‌ರನ್ನು ಸ್ಮರಿಸುವ ದಿನ. ಅವರ ವಿಚಾರಗಳು ನಮಗೆ ಸ್ಫೂರ್ತಿಯನ್ನು ನೀಡುವುದರಲ್ಲಿ ಸಂಶಯವಿಲ್ಲ.

ಏಪ್ರಿಲ್ 5 ವಿಶ್ವ ಆರೋಗ್ಯ ದಿನ. ಆರೋಗ್ಯವೇ ಭಾಗ್ಯ. ನಮ್ಮ ಜೀವನ ಶೈಲಿಯಿಂದ ಆರೋಗ್ಯವಂತರಾಗಿರಲು ಸಾಧ್ಯ. ಯಾಂತ್ರಿಕ ಜೀವನದ ನಡುವೆಯೂ ಸರಿಯಾದ ಜೀವನ ಶೈಲಿಯನ್ನು ಅನುಸರಿಸಿ ಆರೋಗ್ಯವಂತರಾಗೋಣ. ಏಪ್ರಿಲ್ 18 ವಿಶ್ವ ಸಂಸ್ಕೃತಿ ದಿನ. ಆಯಾ ದೇಶದ ಜನರ ಆಚಾರ, ವಿಚಾರಗಳನ್ನು ಪ್ರತಿನಿಧಿಸುವುದೇ ಸಂಸ್ಕೃತಿ. ಎಲ್ಲಾ ಸಂಸ್ಕೃತಿಯೂ ಮೂಲತಃ ದಯೆ, ಕರುಣೆ, ಪರೋಪಕಾರದಂತಹ ಮಾನವೀಯ ಮೌಲ್ಯಗಳನ್ನು ಬೋಧಿಸುತ್ತದೆ. ಆದರೆ ಈಗ ಏನಾಗುತ್ತಿದೆ? ಎಲ್ಲೆಲ್ಲೂ ಕ್ರೌರ್ಯ, ಹಿಂಸೆ. ನಮ್ಮ ಭೇದಗಳನ್ನು ಬಿಟ್ಟು ಪರಸ್ಪರರಲ್ಲಿ ಪ್ರೀತಿ, ಶಾಂತಿಯನ್ನು ಮೆರೆಯುವಂತಾದರೆ ವಿಶ್ವ ಸಂಸ್ಕೃತಿ ದಿನದ ಸಾರ್ಥಕತೆಯಲ್ಲವೇ?

ಸಂಪಾದಕರು



ನಮ್ಮ ಪೂರ್ವಿಕರು ಶ್ರೇಷ್ಠರಾಗಿದ್ದರು ಮತ್ತು ಇಡೀ ಜಗತ್ತಿನ ಗೌರವವನ್ನು ಸಂಪಾದಿಸಿದ್ದರು ; ಇದಕ್ಕೆ ಕಾರಣ ಅವರಿಗೆ ತನ್ನ ಉಚ್ಚ ರಾಷ್ಟ್ರೀಯ ಆದರ್ಶಗಳ ಮತ್ತು ರಾಷ್ಟ್ರದ ಆತ್ಮ ಗೌರವದ ಅರಿವು ಇದ್ದೀತೆಂಬುದು.

- ಡಾ. ಹೆಡಗೇವಾರ್, 1889-1940

## ಸೂಕ್ತಿ

ಕರ್ಮಭೂಮಿಮಿಮಂ ಪ್ರಾಪ್ಯ ಕರ್ತವ್ಯಂ ಕರ್ಮಯಚ್ಛುಭಮ್ ।
ಅಗ್ನಿರ್ವಾಯುಶ್ಚ ಸೋಮಶ್ಚ ಕರ್ಮಣಾಂ ಫಲಭಾಗಿನಃ ॥

- ರಾಮಾಯಣ

## ಪರಿವಿಡಿ


- ಯುಗಾದಿ ಮಹತ್ವ 3
- ಹೊಸ ವರ್ಷಕ್ಕೆ ಹತ್ತು ಸಂಕಲ್ಪಗಳು 4
- ಶಿಕ್ಷಣ ವಿರೋಧಿ ಬಜೆಟ್ 5
- ಸಂಘ ಶಾಖೆಯ ಆವಿಷ್ಕರ್ತ ಡಾ॥ ಹೆಡಗೇವಾರ್ 6
- ಸಂಸ್ಕೃತಿ ಮತ್ತು ಮಹಿಳೆ 9
- ವಿದ್ಯಾರ್ಥಿ ಮಂಟಪ 10
- ಸಾಧಕರನ್ನು ಸ್ಮರಿಸೋಣ 11

# ಯುಗಾದಿ ಮಹತ್ವ

ಸಂ. ನಾಗಲಕ್ಷ್ಮೀ
ಬೆಂಗಳೂರು

**"ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ
ಹೊಸವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ"**

ವರಕವಿ, ಯುಗದ ಕವಿ, ಜಗದ ಕವಿ ದ.ರಾ.ಬೇಂದ್ರೆಯವರ ಈ ಗೀತೆ ಯಾರಿಗೆ ತಿಳಿಯದು? ಪ್ರತಿ ಸಂವತ್ಸರದಲ್ಲಿ ಮತ್ತು ಚೈತ್ರಮಾಸದಲ್ಲಿ ಬರುವ ಮೊದಲ ಹಬ್ಬ ಯುಗಾದಿ. ಇಡೀ ವರ್ಷಕ್ಕೆ ಪೀಠಿಕೆಯ ರೂಪದಲ್ಲಿರುವ ಸಂಭ್ರಮದ ದಿನ. ಅದಕ್ಕೆ ಅನುಗುಣವಾಗಿ ಸಂಕಲ್ಪ ಮಾಡುವ ದಿನ. ಈ ದಿನ ಮನದಲ್ಲಿ ಏನೆಂದುಕೊಳ್ಳುತ್ತೇವೆಯೋ ಅದು ಸುಲಲಿತವಾಗಿ ನಡೆದೇ ತೀರುತ್ತದೆ ಎಂಬ ನಂಬಿಕೆಯ ದಿನ. ಅಷ್ಟೇ ಅಲ್ಲ, ಆ ದಿನ ನಡೆಯುವ ಒಳ್ಳೆಯ ಅಥವಾ ಕೆಟ್ಟ ಸಂಗತಿ ಇಡೀ ವರ್ಷದಲ್ಲಿ ಮುಂದುವರಿಯುತ್ತದೆಂಬ ನಂಬಿಕೆ ಜನರಲ್ಲಿದೆ. ಒಂದು ರೀತಿಯಲ್ಲಿ ಯೋಚಿಸಿದಾಗ ಇದು ಮೂಢನಂಬಿಕೆಯೆನ್ನಿಸ ಬಹುದೇನೊ, ಆದರೆ ಒಂದು ಸಕಾರಾತ್ಮಕ ಚಿಂತನೆಯನ್ನು ನಮ್ಮಲ್ಲಿ ಮೂಡಿಸಲು ಇಂತಹ ನಂಬಿಕೆಗಳು ನೆರವಾಗುವುದಾದರೆ ಇದನ್ನು ಒಪ್ಪಿಕೊಳ್ಳುವುದರಲ್ಲಿ ಬಾಧಕವಿಲ್ಲ. ಬೆಳಗ್ಗೆ ಎದ್ದು ದೇವರ ಪಟವನ್ನೋ, ಇಷ್ಟ ಜನರನ್ನೋ ನೋಡಿದರೆ ಇಡೀ ದಿನ ಹರ್ಷದಾಯಕವಾಗಿರುತ್ತದೆಂಬ ನಂಬಿಕೆ ಇದೆಯಲ್ಲವೇ? ಹಾಗೆಯೇ ಯುಗಾದಿಯ ಕುರಿತೂ ನಮ್ಮ ಚಿಂತನೆ. ಇಂತಹ ಯುಗಾದಿ ಹಬ್ಬದ ಆಚರಣೆಯ ವೈಶಿಷ್ಟ್ಯವನ್ನು ತಿಳಿದು ಕೊಳ್ಳೋಣ.

'ಯುಗಾದಿ' ಎಂದರೆ ಯುಗದ ಪ್ರಾರಂಭ. ಕರ್ನಾಟಕದಲ್ಲಿ 'ಯುಗಾದಿ' ತಮಿಳುನಾಡಿನಲ್ಲಿ 'ಚಿತ್ರವಿಷು', ಉತ್ತರಾಪಥದಲ್ಲಿ 'ಸಂವತ್ಸರ ಪ್ರತಿಪದಾ', ನವವರ್ಷಪ್ರತಿಪದಾ, ಸಂವತ್ಸರಾರಂಭ ಎಂದು ಮಹಾರಾಷ್ಟ್ರದಲ್ಲಿ 'ಗುಡಿಪಾಡ್ಯ' ಎಂದು ಬೇರೆ ಬೇರೆ ಹೆಸರುಗಳಿಂದ ಈ ಹೊಸವರ್ಷದ ಆಚರಣೆಯನ್ನು ಕರೆಯುತ್ತಾರೆ. ಹೀಗೆ ದೇಶದ ಬಹುತೇಕ ರಾಜ್ಯಗಳಲ್ಲಿ ಚೈತ್ರಮಾಸದ ಈ ಹಬ್ಬವನ್ನು ಆಚರಿಸುತ್ತಾರೆ.

ಯುಗಾದಿಯ ಋತು, ಋತುರಾಜನಾದ ವಸಂತನಿಗೆ ಸೇರಿದ್ದು, ಈ ಕಾಲದಲ್ಲಿ ಪ್ರಕೃತಿ ನವಚೈತನ್ಯದಿಂದ ಮೈದೋರಿ ಶೋಭಿಸುತ್ತದೆ. ಎಲ್ಲೆಲ್ಲಿಯೂ ಹೊಸಚಿಗುರಿನಿಂದ ತನ್ನನ್ನು ಅಲಂಕರಿಸಿಕೊಂಡು ಜಗತ್ತಿಗೇ ಹೊಸತನದ ಸಂದೇಶವನ್ನು ಸಾರುತ್ತದೆ. ಅದೇ ರೀತಿ ನಾವು ಕೂಡ ನಮ್ಮ ಹಳೆಯ ವಿಚಾರಗಳನ್ನು (ಅಂದರೆ ಅವಿಚಾರಗಳಿದ್ದರೆ) ಲೋಪದೋಷ ಗಳನ್ನು ದೂರಮಾಡಿಕೊಂಡು, ಆದರ್ಶದ ಸಂಕಲ್ಪಗಳನ್ನು ಮಾಡಿಕೊಂಡು, ಹೊಸಮಾರ್ಗದಲ್ಲಿ, ಹೊಸಹೆಜ್ಜೆಯನ್ನಿಡ ಬೇಕೆಂಬ ಸಂದೇಶವೂ ಇಲ್ಲಿದೆ.

ಪೌರಾಣಿಕ ಮಾಹಿತಿಯ ಪ್ರಕಾರ ಯುಗಾದಿಯ ಈ ದಿನ ಭಗವಂತನು ಮತ್ಸ್ಯಾವತಾರ ಮಾಡಿದ ದಿನ. ಶ್ರೀ ರಾಮನು ವನವಾಸದಿಂದ ಹಿಂದಿರುಗಿದ ದಿನ. ಅಯೋಧ್ಯೆಯ ಪ್ರಜೆಗಳು ಶ್ರೀರಾಮನು ಮಾಡಿದ ರಾವಣವಧೆಯನ್ನು ಸ್ತುತಿಸಿ ಉತ್ಸವ ಪ್ರಾರಂಭಿಸಿದ ದಿನ.



ಚಾಂದ್ರಮಾನ ಯುಗಾದಿಯ ಹಬ್ಬದ ಆಚರಣೆ ಚೈತ್ರಶುದ್ಧ ಪ್ರತಿಪದೆಯ ದಿನದಲ್ಲಿಯೂ, ಸೌರಮಾನ ಯುಗಾದಿ ಮೇಷ ಸಂಕ್ರಮಣದ ದಿನದಲ್ಲಿಯೂ ಮಾಡಲಾಗುತ್ತದೆ. ಹಬ್ಬದ ದಿನ ಅಭ್ಯಂಜ ಸ್ನಾನ ಮಾಡುವುದು, ಮನೆಗೆ ತಳಿರುತೋರಣಗಳಿಂದ ಅಲಂಕಾರ ಮಾಡುವುದು. ವಿಶೇಷವಾಗಿ ಮಾವಿನ ಎಲೆಗಳ ಜೊತೆಗೆ ಬೇವಿನ ಸೊಪ್ಪನ್ನು ಸೇರಿಸಿ ಅಲಂಕರಿಸುವುದು ಸಂಪ್ರದಾಯವಾಗಿದೆ. ಮಾವಿನ ಎಲೆ ಬೆಳೆಯ ಸಮೃದ್ಧಿ ಮತ್ತು ಎಲ್ಲ ರೀತಿಯ ಸೌಖ್ಯದ ಸಂಕೇತವಾದರೆ, ಬೇವಿನ ಎಲೆಗಳಿಗೆ ಆಯುರ್ವೇದದಲ್ಲಿ ತುಂಬ ಮಹತ್ವದ ಸ್ಥಾನವಿದೆ.

ಪ್ರಾತಃಕಾಲದ ತೈಲಾಭ್ಯಂಗ ಸ್ನಾನದ ನಂತರ ನಾಲ್ಕು ಪುರುಷಾರ್ಥಗಳ ಪ್ರಾಪ್ತಿಗಾಗಿ ಸಂವತ್ಸರ ಪ್ರತಿಪದೆಯ ವ್ರತವನ್ನು ಮಾಡುವುದಾಗಿ ಸಂಕಲ್ಪಮಾಡಿ ಪೂಜಾಕಾರ್ಯದಲ್ಲಿ ಯುಗಾದಿಯ ದೇವತೆಯಾದ ಪ್ರಜಾಪತಿ ಕಾಲಪುರುಷನಾದ ಬ್ರಹ್ಮದೇವನನ್ನು 'ಓಂ ತತ್ಸತ್ ಬ್ರಹ್ಮಣೇ ನಮಃ' ಎಂಬ ಮಂತ್ರ ದೊಡನೆ ಪೂಜಿಸಬೇಕು, ಬ್ರಹ್ಮದೇವನು ತನ್ನ ಸೃಷ್ಟಿಕಾರ್ಯವನ್ನು ಪ್ರಾರಂಭಿಸಿದ ಪುಣ್ಯದಿನವೆಂಬುದೂ ಈ ದಿನದ ವೈಶಿಷ್ಟ್ಯ. ಪೂಜೆಯ ನಂತರ ನೈವೇದ್ಯಕ್ಕಿಟ್ಟಿದ್ದ ಬೇವು-ಬೆಲ್ಲದ ಮಿಶ್ರಣದ ಸೇವನೆ ಈ ದಿನದ ಅತಿ ಮಹತ್ವದ ಅಂಶ. "ಶತಾಯುರ್ವಜ್ರ ದೇಹಾಯ। ಸರ್ವ ಸಂಪತ್ಕರಾಯಚ। ಸರ್ವಾರಿಷ್ಟ ವಿನಾಶಾಯ ನಿಂಬಕಂದಳ ಭಕ್ಷಣ।" ಎಂಬ ಶ್ಲೋಕವನ್ನು ಹೇಳುತ್ತಾ ಈ ಮಿಶ್ರಣವನ್ನು ಸೇವಿಸಬೇಕು. ಇದರಲ್ಲಿರುವ ಪದಾರ್ಥಗಳು ಎಳೆಯದಾದ ಬೇವಿನ ಎಲೆಗಳು, ಬೇವಿನ ಹೂಗಳು, ಬೆಲ್ಲ, ಮೆಣಸು, ಉಪ್ಪು, ಜೀರಿಗೆ, ಇಂಗು, ಓಮಕ್ಕಿ ಎಲ್ಲವನ್ನು ಕುಟ್ಟಿ ತಯಾರಿಸಿದ ಈ ಮಿಶ್ರಣ ಷಡ್ರಸಗಳ ರುಚಿಯನ್ನು ಹೊಂದಿರುತ್ತದೆ. ಕೆಲವರು ಕೇವಲ ಬೇವಿನ ಚಿಗುರು, ಬೆಲ್ಲ, ತುಪ್ಪದ ಮಿಶ್ರಣ

ಪುಟ 8 ಕ್ಕೆ ➤

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ. – ಅಕ್ಕಮಹಾದೇವಿ

# ಹೊಸವರ್ಷಕ್ಕೆ ಹತ್ತು ಸಂಕಲ್ಪಗಳು



**ಪಾರ್ವತೀತನಯ**
**ಬೆಂಗಳೂರು**

ಚೈತ್ರ ಮಾಸದ ಆಗಮನದೊಂದಿಗೆ ಪ್ರಕೃತಿಯಲ್ಲಿ ಬದಲಾವಣೆ. ಶಿಶಿರದ ಹೊಡೆತಕ್ಕೆ ಸಿಕ್ಕು ಎಲೆಗಳನ್ನು ಕಳೆದುಕೊಂಡು ಬೋಳಾಗಿದ್ದ ಮರ ಗಿಡಗಳು ಚೈತ್ರದ ಆಗಮನದೊಂದಿಗೇ ಚಿಗುರೊಡೆದು ನಳನಳಿಸುತ್ತವೆ. ಹೊಸ ಉಡುಗೆ ತೊಟ್ಟು ಶೋಭಿಸುತ್ತವೆ. ಕೋಗಿಲೆ ಕಾಜಾಣಗಳು ಚಿಗುರು ತಿಂದು ಸುಸ್ವರ ದನಿಯಲ್ಲಿ ಹಾಡತೊಡಗುತ್ತವೆ. ಸಕಲ ಜೀವರಾಶಿಗೆ ಆನಂದದ ಅನುಭವವನ್ನ ಉಣಿಸುತ್ತದೆ ನವಚೈತ್ರ. ಅದಕ್ಕೆಂದೇ ಚೈತ್ರ ಶುದ್ಧ ಪಾಡ್ಯ ನಮಗೆ ಹೊಸವರ್ಷ. ಇಂಥ ಬದಲಾವಣೆಯ ಮಂಗಳಮಯ ಪರ್ವಕಾಲದಲ್ಲಿ ನಮ್ಮ ಜೀವನದಲ್ಲೂ ಬದಲಾವಣೆಯನ್ನು ಕಾಣಬೇಕಲ್ಲವೇ? ಹಳತು ಕಳಚಿ ಹೊಸತು ಮೂಡಬೇಕಲ್ಲವೇ? ಅದಕ್ಕಾಗಿ ಈ ನವವರ್ಷದಲ್ಲಿ ನಾವು ಕೆಲವು ಸಂಕಲ್ಪಗಳನ್ನು ಮಾಡಬಹುದಲ್ಲವೇ? ಇದರ ಬಗ್ಗೆ ನಮ್ಮ ಮಕ್ಕಳಿಗೂ ತಿಳಿಹೇಳಬಹುದಲ್ಲವೇ? ಬನ್ನಿ ನಾವೆಲ್ಲರೂ ಒಗ್ಗೂಡಿ ಈ ಕೆಳಗಿನ ಸಂಕಲ್ಪಗಳನ್ನು ಮಾಡೋಣ.

1. ಆಕಾಶ ವಾಣಿಯಲ್ಲಿ ಬೆಳಗಿನ 6 ಕ್ಕೆ ವಂದೇ ಮಾತರಂ ಗಾನ ಮೊಳಗುತ್ತದೆ. ಕನಿಷ್ಠ ಆ ಸಮಯಕ್ಕೆ ಮುನ್ನ ನಾವು ಹಾಸಿಗೆ ಬಿಟ್ಟೆದ್ದು ಮುಖಮಾರ್ಜನವನ್ನು ಮುಗಿಸಬಹುದೇ?
2. 'ಶರೀರ ಮಾದ್ಯಂಖಲು ಧರ್ಮಸಾಧನಂ' ಅಂದರೆ ಎಲ್ಲ ಕೆಲಸಗಳ ಯಶಸ್ಸು ನಮ್ಮ ಶರೀರದ ಸುಸ್ಥಿತಿಯನ್ನು ಅವಲಂಬಿಸಿದೆ. ಶರೀರವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು 'ವ್ಯಾಯಾಮ' ಅತಿ ಅಗತ್ಯ. ಅದಕ್ಕಾಗಿ ದಿನನಿತ್ಯ ಕನಿಷ್ಠ ಅರ್ಧಗಂಟೆಯನ್ನು ವ್ಯಾಯಾಮಕ್ಕಾಗಿ ತೆಗೆದಿಟ್ಟು, ಆಟೋಟ ಗಳು, ಯೋಗ, ವಾಕಿಂಗ್ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ನಿರ್ಧಾರ ಮಾಡಬೇಕಲ್ಲವೇ?
3. ಶರೀರ ಸ್ವಚ್ಛವಾಗಿದ್ದು, ಚರ್ಮಕ್ಕೆ ಕಾಂತಿ ಅಥವಾ ಹೊಳಪು ಸಿಗಲು ಸ್ನಾನ ತುಂಬಾ ಮುಖ್ಯ. ಬಿಸಿನೀರು ಅಥವಾ ತಣ್ಣೀರು ಯಾವುದಾದರೂ ಸರಿ, ನಿತ್ಯ ಮೈತೊಳೆಯೋಣ. ಕಡಲೆಹಿಟ್ಟು, ಸೀಗೆಪುಡಿ ಅಥವಾ ಸೋಪನ್ನಾದರೂ ಉಪಯೋಗಿಸಿ ದಿನನಿತ್ಯ ಸ್ನಾನ ಮಾಡುವ ನಿರ್ಧಾರ ಮಾಡೋಣ.
4. ಸ್ವಚ್ಛ ಶರೀರದಂತೆ ಸ್ವಚ್ಛ ಮನಸ್ಸೂ ಮುಖ್ಯ. ಅದಕ್ಕಾಗಿ ಏಕಾಂತದಲ್ಲಿ ಕೂತು ಇಷ್ಟ ದೈವವನ್ನು ಧ್ಯಾನಿಸೋಣ. ಇದರಿಂದ ಮನಸ್ಸಿಗೆ ನೆಮ್ಮದಿ, ಶಾಂತಿ ಸಿಗುವುದು ಖಂಡಿತ.
5. 'Made in India' ಬಗ್ಗೆ ಅಭಿಮಾನ ತಾಳಿ ಈಗಿನಿಂದ ಸ್ವದೇಶಿ ವ್ರತ ತೊಡಬಹುದಲ್ಲವೇ? ಇನ್ನು ನಾಲ್ಕೂವರೆ ವರ್ಷಕ್ಕೆ ಗಾಂಧೀಜಿಯವರ 150 ನೇ ಜನ್ಮದಿನ. ಆ ವೇಳೆಗೆ ನಾವು ಪೂರ್ಣ ಸ್ವದೇಶೀ ವ್ರತಧಾರಿಗಳಾದರೆ ಅವರ ಆತ್ಮಕ್ಕೆ ಅದೆಷ್ಟು ಸಂತೋಷ ವಾದೀತು. ಈ ನಿರ್ಧಾರಕ್ಕೆ ಇದೇ ಸುಸಮಯ ಅಲ್ಲವೇ?.
6. ನಮ್ಮ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ನಮಗೆ ತಿಳಿದೇ ಇಲ್ಲ ಎಂದು ಎಲ್ಲ ಪ್ರವಾಸಿಗರೂ ದೂರುತ್ತಾರೆ. ಇದನ್ನು ನಮಗೆ ತಿಳಿಸಲು ಓರ್ವ ನರೇಂದ್ರ ಮೋದಿ ಬರಬೇಕಾಯ್ತು. ಈಗಲಾದರೂ ನಾವು ನಮ್ಮ ಮನೆ, ಶಾಲೆ ನಮ್ಮ ಊರು ಕೇರಿಯನ್ನು ಸ್ವಚ್ಛವಾಗಿಡುವ ಸಂಕಲ್ಪ ಮಾಡಬೇಕಲ್ಲವೇ?.
7. ಭಾರತೀಯ ಸಂಸ್ಕೃತಿ ಉಳಿದು, ಬೆಳೆದಿರುವುದಕ್ಕೆ ಇಲ್ಲಿನ ಕುಟುಂಬ ಪದ್ಧತಿಯೇ ಆಧಾರ ಎಂದು ಒಮ್ಮೆ ಇಂಗ್ಲೆಂಡಿನ ಮಾಜಿ ಪ್ರಧಾನಿ ಮಾರ್ಗರೆಟ್ ಥ್ಯಾಚರ್ ಉದ್ಗರಿಸಿದ್ದರು. ಅಂತಹ ಉತ್ತಮವಾದ ಪದ್ಧತಿ ಇಂದು ನೆಲಕಚ್ಚುತ್ತಿದೆ. ಅಪ್ಪ, ಅಮ್ಮ, ಅಜ್ಜಿ ತಾತ, ಮಾವ, ಅತ್ತೆ, ಅಣ್ಣ, ತಂಗಿ ಎಲ್ಲ ಸಂಬಂಧಗಳು ಬಿರುಕು ಬಿಡುತ್ತಿವೆ. ನಾವು ಈ ಬಿರುಕನ್ನು ಮುಚ್ಚಿ ಸಂಬಂಧಗಳನ್ನು ಮರು ಸ್ಥಾಪಿಸುವ ಮನಸ್ಸು ಮಾಡಬಹುದಲ್ಲವೇ? ಅದಕ್ಕಾಗಿ ತಿಂಗಳಿಗೊಮ್ಮೆಯಾದರೂ ನಮ್ಮ ಸಮೀಪ ಬಂಧುಗಳಿಗೆ ಕಾಗದ, ಇ-ಮೇಲ್, ದೂರವಾಣಿ ಕರೆಮಾಡಿ ಮಾತನಾಡುವ ನಿರ್ಧಾರ ಒಳ್ಳೆಯದಲ್ಲವೇ?
8. ಪ್ರತಿ ನಿತ್ಯ ನಾವು ಮಾಡಿದ ಒಳ್ಳೆಯ ಕೆಲಸ, ಕೆಟ್ಟ ಕೆಲಸಗಳ ಪಟ್ಟಿಮಾಡಿ ವಾರಕ್ಕೊಮ್ಮೆ ಅವಲೋಕನ ಮಾಡಿದರೆ ಕೆಟ್ಟದ್ದು ಕಡಿಮೆಯಾಗಿ ಒಳ್ಳೆಯದು ಜಾಸ್ತಿಯಾದೀತು. (ಇದನ್ನು ಮಾಡುವ ಸಂಕಲ್ಪ ಮಾಡಿದರೆ ಹೇಗೆ?).

**ಪುಟ 5 ಕ್ಕೆ ➤**

## ರಾಜ್ಯ ಬಜೆಟ್‌ಗೆ ನಮ್ಮ ಶಾಸಕರ ಪ್ರತಿಕ್ರಿಯೆ

# ಶಿಕ್ಷಣ ವಿರೋಧಿ ಬಜೆಟ್

ಇದೊಂದು ಶಿಕ್ಷಣ ವಿರೋಧಿ ಬಜೆಟ್ ಆಗಿದ್ದು, ಕಳೆದ ವರ್ಷ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ 17,425.000 ಕೋಟಿ ಒದಗಿಸಲಾಗಿದ್ದನ್ನು ಕಡಿತಗೊಳಿಸಿ 16.24.000 ಕೋಟಿಗೆ ಇಳಿಸಿರುವುದು ಶಿಕ್ಷಣ ವಿರೋಧಿ ಬಜೆಟ್ ಆಗಿದೆ. ಇದರಲ್ಲಿ ಸರ್ಕಾರಿ ಶಾಲಾ ಕಾಲೇಜುಗಳ ಪ್ರಯೋಗಾಲಯ ಹೊಸ ಕಟ್ಟಡ ಮೂಲಭೂತ ಸೌಕರ್ಯ ಒದಗಿಸಲು ಕೊಟ್ಟಿರುವ 110.00 ಕೋಟಿ ಯಾವುದಕ್ಕೂ ಸಾಲದು. ಈ ಹಿಂದೆ ಶಾಲೆಗಳ ದತ್ತು ಯೋಜನೆ ಚಾಲ್ತಿಯಲ್ಲಿದ್ದು ವಿಫಲವಾಗಿದೆ. ಅದಕ್ಕೆ ಪುನರ್ ನಾಮಕರಣ ಮಾಡಿ (Corporate Social Responsibility) ಸಮಿತಿ ರಚಿಸುವುದಾಗಿ ಘೋಷಿಸಿರುವುದು ಹಾಸ್ಯಾಸ್ಪದ. ಒಂದೇ ಒಂದು ಸಣ್ಣ ಕೊಡುಗೆಯನ್ನು, ಶಿಕ್ಷಕರಿಗೆ, ಶಿಕ್ಷಣ ಕ್ಷೇತ್ರಕ್ಕೆ ಕೊಟ್ಟಿಲ್ಲ. ಶಿಕ್ಷಕರ ನೇಮಕಾತಿ ಖಾಲಿ ಇರುವ ಹುದ್ದೆಗಳಿಗೆ ಅನುಮತಿ, ಅನುದಾನ ವಿಸ್ತರಣೆ ಇಂತಹ ಯಾವುದೇ ಬೇಡಿಕೆಗಳು ಈಡೇರಿಲ್ಲ. ಒಟ್ಟಾರೆ ಇದೊಂದು ಶಿಕ್ಷಕರ ಹಾಗೂ ಶಿಕ್ಷಣ ವಿರೋಧಿ ಬಜೆಟ್ ಆಗಿದೆ.

ಉನ್ನತ ಶಿಕ್ಷಣ ಕ್ಷೇತ್ರಕ್ಕೂ ಕಳೆದ ಬಜೆಟ್‌ಗೆ ಹೋಲಿಸಿದರೆ ಬರೀ 16.00 ಕೋಟಿ ಹೆಚ್ಚಳ ಮಾಡಿರುವುದು ಯಾವುದಕ್ಕೂ ಸಾಲದು. ಯಾವುದೇ ವಿಶ್ವವಿದ್ಯಾಲಯಕ್ಕೂ ಯಾವುದೇ ವಿಶೇಷ ಅನುದಾನ ಘೋಷಣೆ ಮಾಡದಿರುವುದು ನಿರಾಶಾದಾಯಕ. ಖಾಲಿ ಶಿಕ್ಷಣ ಇಲಾಖೆ ಎಂದೆನಿಸಿಕೊಳ್ಳುತ್ತಿರುವ ಉನ್ನತ ಶಿಕ್ಷಣಕ್ಕೆ ಅನುದಾನ ವಿಸ್ತರಣೆ, ಖಾಲಿ ಹುದ್ದೆಗಳ ಭರ್ತಿಗೆ ಯಾವುದೇ ಕ್ರಮ ತೆಗೆದುಕೊಳ್ಳದಿರುವುದು ನಿರಾಸೆ ಮೂಡಿಸಿದೆ.

ಈ ಹಿಂದೆ ನನಗೆ ಸದನದಲ್ಲಿ ನೀಡಿದ ಭರವಸೆಯಂತೆ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮಂಜೂರಾಗಿರುವುದು, ಭಾಸ್ಕರಾಚಾರ್ಯರ 900 ನೇ ಜಯಂತಿ ನೆನಪಿಗೋಸ್ಕರ ವಿಶ್ವವಿದ್ಯಾಲಯದಲ್ಲಿ ಅವರ ಹೆಸರನ್ನೇ ಅಧ್ಯಯನ ಕೇಂದ್ರಕ್ಕೆ 1.00 ಕೋಟಿ ಮಂಜೂರಾಗಿರುವುದು, ಬಾಗಲಕೋಟೆಯಲ್ಲಿ ಐ.ಟಿ. ಪಾರ್ಕ್ ನೀಡಿರುವುದು ಹಾಗೂ ಮಿನಿ ತಾರಾಲಯ ಘೋಷಣೆ ಮಾಡಿರುವುದು ಸಮಾಧಾನಕರವಾದರೂ ಬೆಳಗಾವಿ ಜಿಲ್ಲೆಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಬೆಳಗಾವಿಯೆಡೆಗೆ ವಕ್ರ ನೀತಿಯಾಗಿದೆ.

**ಅರುಣ್ ಶಹಾಪುರ,** ಕರಾಮಾಶಿ ಸಂಘದ ಶಾಸಕರು

### ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಪತ್ರಿಕೆಯ ಪ್ರಾರೂಪ

(ಪ್ರಾರೂಪ 8, ವಿಧಿ 8)

**ಪ್ರಕಟಣೆಯ ಸ್ಥಳ** : ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು-560020

**ಪ್ರಕಾಶಕ** : ಕೃ. ನರಹರಿ
ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು-560020

**ಮಾಲೀಕತ್ವ** : **ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.)**
ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು-560020

**ಸಂಪಾದಕ** : **ಕೃ. ನರಹರಿ (ಮೇಲಿನದೇ ವಿಳಾಸ)**

**ಭಾರತದ ಪ್ರಜೆಯೇ** : **ಹೌದು**

**ಮುದ್ರಕ** : **ರಾಷ್ಟ್ರೋತ್ಥಾನ ಮುದ್ರಣಾಲಯ,**
ಬೆಂಗಳೂರು - 560 019

**ಮೇಲೆ ಕೊಟ್ಟಿರುವ ವಿಷಯಗಳು ನನ್ನ ನಂಬಿಕೆಯಲ್ಲಿ ಪೂರ್ಣ ಸತ್ಯವೆಂದು ನಾನು ಕೃ. ನರಹರಿ ಘೋಷಿಸುತ್ತೇನೆ.**

**ಬೆಂಗಳೂರು** **(ಸಹಿ) ಕೃ. ನರಹರಿ**
**1.3.2015** **ಪ್ರಕಾಶಕ**

➢ ಪುಟ 4 ರಿಂದ..... **ಹೊಸ ವರ್ಷಕ್ಕೆ**

9. ಪುರಂದರದಾಸರು 'ಕೆರೆಯನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ' ಎಂದರು. ಸಮಾಜ ನಮಗೆ ನೀಡಿದ್ದನ್ನು ಹಿಂದಿರುಗಿಸಿ ಅದರ ಋಣ ತೀರಿಸುವುದು ನಮ್ಮ ಜವಾಬ್ದಾರಿ ಎಂದು ಈ ಮಾತಿನ ಅರ್ಥ. ಅದಕ್ಕಾಗಿ ನಮ್ಮ ಸಮಯ, ಹಣ, ಶಕ್ತಿಯ ಸ್ವಲ್ಪ ಭಾಗವನ್ನು ಮೀಸಲಿಟ್ಟು ಯಾವುದಾದರೂ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವ ನಿರ್ಧಾರ ಮಾಡುವುದಕ್ಕೆ ಯುಗಾದಿಯೇ ಶುಭ ಸಂದರ್ಭ.
10. ನಿರ್ಧಾರಗಳನ್ನು ಮಾಡುವುದು ಸುಲಭ. ಅದನ್ನು ಸತತವಾಗಿ ನಿಭಾಯಿಸುವುದು ತುಂಬಾ ಕಷ್ಟ. ಆದ್ದರಿಂದ ನಾವು ಮಾಡಿದ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ, ಏನೇ ಕಷ್ಟವಾಗಲೀ ಅದನ್ನು ನಿಭಾಯಿಸಿಯೇ ತೀರುತ್ತೇನೆ ಎಂಬ ಕೊನೇ ಸಂಕಲ್ಪವನ್ನು ಮಾಡೋಣವೇ?.

ಬೇವು - ಬೆಲ್ಲ ತಿಂದು, ಸರ್ವಶಕ್ತನು ನಮ್ಮ ಸಂಕಲ್ಪಗಳನ್ನು ಈಡೇರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸೋಣ.

●




**ಶ್ರೀ ಚಂದ್ರಶೇಖರ ಭಂಡಾರಿ**
**ಬೆಂಗಳೂರು**



**1.** ಕಳೆದ ಶತಮಾನದ 60 ರ ದಶಕದ ಮಧ್ಯಭಾಗದಲ್ಲಿ ಪ್ರಾಯಶಃ 1968–69 ಇರಬಹುದು– ನವದೆಹಲಿಯ ಸಂಸತ್ ಭವನದ ಲಾಬಿಯಲ್ಲಿ ನಡೆದಿದ್ದ ಒಂದು ಪ್ರಸಂಗ. ಕೆಲವು ಸಂಸತ್ ಸದಸ್ಯರು ಹೆಚ್ಚಿನವರು ಕಮ್ಯುನಿಷ್ಟ್ ಪಕ್ಷದವರು ಲೋಕಾಭಿರಾಮ ಮಾತುಕತೆಯಲ್ಲಿ ತೊಡಗಿದ್ದ ಸಂದರ್ಭ. ಅವರ ಜತೆಯಲ್ಲಿದ್ದವರು ಆಗ ರಾಜ್ಯಸಭಾ ಸದಸ್ಯರು ಮತ್ತು ಭಾರತೀಯ ಮಜುದಾರ ಸಂಘದ ಸಂಸ್ಥಾಪಕರು ಆರ್.ಎಸ್.ಎಸ್ ನ (ಸಂಘದ) ಹಿರಿಯ ಪ್ರಚಾರಕರೂ ಆಗಿದ್ದ ಶ್ರೀ ದತ್ತೋಪಂತ ಠೇಂಗಡಿಯವರು. ಮಾತುಕತೆ ನಡೆಯುತ್ತಿದ್ದುದು ಸಂಘದ ಕುರಿತಾಗಿಯೇ. ಕಮ್ಯುನಿಸ್ಟ್ ಸಂಸದರೊಬ್ಬರು "ರೀ ಠೇಂಗಡಿಯವರೇ ಯಾರ್ರೀ ನಿಮ್ಮ ಸಂಘದ ಸ್ಥಾಪಕರು? ಯಾರೋ ಹೆಡ್ಗೇವಾರ್ ಎಂಬವರಂತೆ. ಯಾರವರು? ನಾನೀವರೆಗೆ ಅವರನ್ನು ನೋಡಿಯೇ ಇಲ್ಲ. ಕೇಳಿಯೇ ಇಲ್ಲವಲ್ಲ" ಎಂದು ಪ್ರಶ್ನಿಸಿದರು. ಅವರ ಮಾತಿನಲ್ಲಿ ಗೇಲಿ, ಕುಚೇಷ್ಟೆ ಇದ್ದುದು ಸುಸ್ಪಷ್ಟ. ಆಗ ಅವರದೇ ಪಕ್ಷದ ಹಿರಿಯ ಸಂಸದರೊಬ್ಬರು ಪ್ರಾಯಶಃ ಸಂಘದ ವಿಚಾರ ಒಪ್ಪದಿದ್ದರೂ ಒಂದಿಷ್ಟು ಮೆಚ್ಚುಗೆ ಇದ್ದವರಿರಬಹುದು ತಮ್ಮ ಗೆಳೆಯರ ಕಡೆಗೆ ತಿರುಗಿ "ರೀ, ನಿಮಗೆ ಸಂಘದೊಂದಿಗೆ ವೈಚಾರಿಕ ಭಿನ್ನಾಭಿಪ್ರಾಯವಿರಬಹುದು. ಆದರೆ ಯಾವುದೇ ಮಹಾಪುರುಷರ ಬಗ್ಗೆ ಲಘುವಾದ ಮಾತು ಸರಿಯಲ್ಲ". ಎಂದು ಗದರಿಸಿದರು. ಇದರಿಂದ ತುಸು ಗಂಭೀರರಾದ ಅದೇ ಮೊದಲು ಪ್ರಶ್ನಿಸಿದವರು "ಸರಿ ಹಾಗಾದರೆ, ಆದರೆ ಮಹಾಪುರುಷರೆಂದಿರಲ್ಲ ಅಂತಹವರನ್ನು ಗುರುತಿಸುವುದು ಹೇಗೆ? ವ್ಯಕ್ತಿಯೊಬ್ಬನ ಮಹಾನತೆಗೆ ಅಳತೆಗೋಲು ಯಾವುದು?" ಎಂಬ ಹೊಸ ಪ್ರಶ್ನೆಯೊಡ್ಡಿದರು. ಆಗ ಆ ಹಿರಿಯರು ಮಹಾನತೆಯನ್ನು ವಿವರಿಸುವ ಸಲುವಾಗಿ "ನಮ್ಮ ಪ್ರಧಾನಿ ಪಂಡಿತ್ ನೆಹರೂರವರು ಈಗ್ಗೆ 3–4 ವರ್ಷಗಳ ಹಿಂದೆ ನಿಧನರಾದರಲ್ಲ, ಆ ವೇಳೆಗೆ ಅವರು ಮಾರ್ಷಲ್ ಟಿಟೊ, ನಸ್ಸೇರ್ ಅವರುಗಳ ಮಟ್ಟದಲ್ಲಿ ವಿಶ್ವಸ್ತರದ ನಾಯಕರಾಗಿದ್ದರಲ್ಲವೇ? ಆದರೆ ಈಗ ಹೇಳಿ ಅವರ ವಿಚಾರವನ್ನು ತನ್ನ ಜೀವನ ಕಾರ್ಯವಾಗಿ ಮಾಡಿಕೊಂಡು ಅದಕ್ಕಾಗಿ ಸಮರ್ಪಿತರಾಗಿರುವವರು ನಮ್ಮ ದೇಶದಲ್ಲಿ ಎಷ್ಟಿರಬಹುದು? ದೇಶಾದ್ಯಂತ ಹುಡುಕಿದರೂ ಸುಮಾರು 50 ಮಂದಿಯಾದರೂ ಸಿಗಬಹುದೇ? ನನಗೆ ಸಂದೇಹವಿದೆ. ಇರಲಿ.. ಆದರೆ ಹೆಡಗೆವಾರರು ನಿಧನರಾಗಿ ಈಗ 25ಕ್ಕಿಂತ ಹೆಚ್ಚು ವರ್ಷಗಳೇ ಕಳೆದಿವೆ. ಆದರೆ ಅವರು ಆರಂಭಿಸಿದ್ದ ಕಾರ್ಯ ಈಗಲೂ ಬೆಳೆಯುತ್ತಲೇ ಇದೆ. ಅವರ ವಿಚಾರವನ್ನು ತಮ್ಮ ಜೀವನ ಕಾರ್ಯವಾಗಿ ಮಾಡಿಕೊಂಡು ಅದಕ್ಕಾಗಿ ಸಮರ್ಪಿತರಾಗಿರುವವರು ಸಾವಿರಾರು ಮಂದಿ ದೇಶಾದ್ಯಂತ ಇದ್ದಾರೆಂಬುದು ನಿಮಗೆ ತಿಳಿದಿದೆಯೇ? ಗೊತ್ತಿರಲಿ, ವ್ಯಕ್ತಿಯೊಬ್ಬನ ಮಹಾನತೆಗೆ ಅಳತೆಗೋಲು ಭವಿಷ್ಯದ ಮೇಲೆ ಅವನ ನೆರಳು ಅದೆಷ್ಟು ದೀರ್ಘವಿದೆ ಎಂಬುದರಲ್ಲಿದೆ ಎಂದು ಮಾತು ಮುಗಿಸಿದರು.

**2.** ಇಸವಿ 1988–89 ನಮ್ಮ ಪ್ರಧಾನಿಯಾಗಿದ್ದ ಪಂಡಿತ್ ನೆಹರೂ ಮತ್ತು ಸಂಘದ ಸಂಸ್ಥಾಪಕ ಹೆಡಗೆವಾರ್‌ರ ಜನ್ಮ ಶತಮಾನೋತ್ಸವದ ವರ್ಷ ಅದು. ಸಂಘದ ವತಿಯಿಂದ ದೇಶದ ಉದ್ದಗಲಕ್ಕೂ ಸುಮಾರು ಎರಡು ಲಕ್ಷಕ್ಕೂ ಮೀರಿದ ಗ್ರಾಮ ನಗರಗಳಲ್ಲಿ ಮನೆ ಮನೆಗಳ ಸಂಪರ್ಕದ ಮೂಲಕ ಡಾ॥ ಹೆಡಗೆವಾರರ ವ್ಯಕ್ತಿತ್ವದ ಪರಿಚಯ, ಸಾಹಿತ್ಯ ವಿತರಣೆ, ಮಾರಾಟ, ಸಭೆ, ಮೆರವಣಿಗೆ, ವಿಚಾರಗೋಷ್ಠಿ ಇತ್ಯಾದಿ ವೈವಿಧ್ಯಪೂರ್ಣ ಕಾರ್ಯಕ್ರಮಗಳನ್ನು ನಡೆಸಲಾಗಿತ್ತು. ಅದೇ ಸಂದರ್ಭದಲ್ಲಿ ಪ್ರಧಾನಿ ನೆಹರೂರವರ ಶತಮಾನೋತ್ಸವದ ಆಚರಣೆಗಾಗಿ ಕೇಂದ್ರ ಸರ್ಕಾರ ರೂ 300 ಕೋಟಿ ವೆಚ್ಚ ಮಾಡಿತ್ತು.

**ಒಂದು ಸ್ವಾರಸ್ಯಕರ ಮಾಹಿತಿ:–** ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಹೈಸ್ಕೂಲು ವಿದ್ಯಾರ್ಥಿಗಳಿಗೆ ನಡೆಸಲಾಗುವ ವರ್ಷಾಂತ್ಯದ ಪರೀಕ್ಷೆಯ ಪೂರ್ವದ ಮಾಸಿಕ ಪರೀಕ್ಷೆಯಲ್ಲಿ ಸಮಾಜ ವಿಜ್ಞಾನದ ಪ್ರಶ್ನಪತ್ರಿಕೆಯಲ್ಲಿ ಕೇಳಲಾಗಿದ್ದ ಒಂದು ಪ್ರಶ್ನೆ. "ಈ ವರ್ಷ ದೇಶಾದ್ಯಂತ ಯಾವ ಮಹಾಪುರುಷನ ಜನ್ಮಶತಮಾನೋತ್ಸವವನ್ನು ವಿಜೃಂಭಣೆಯಿಂದ ಆಚರಿಸ

**ಪುಟ 7 ಕ್ಕೆ ➤**

➢ ಪುಟ 6 ರಿಂದ.....

ಸಂಘ ಶಾಖೆ

ಲಾಯಿತು?" ನಿರೀಕ್ಷಿತ ಉತ್ತರ 'ಪಂಡಿತ್ ನೆಹರು' ಎಂದಾಗ ಬೇಕಿದ್ದುದು ಸುಸ್ಪಷ್ಟ. ಆದರೆ ಆಶ್ಚರ್ಯದ ಸಂಗತಿಯೆಂದರೆ, ಬೆರಳಣಿಕೆಯಷ್ಟು ಬಿಟ್ಟಲ್ಲಿ, ಹೆಚ್ಚಿನವರೆಲ್ಲ ಬರೆದಿದ್ದ ಉತ್ತರ :– 'ಡಾ॥ ಕೇಶವ ಬಲಿರಾಮ್ ಹೆಡಗೆವಾರ್' ಎಂದು. ವಿಶೇಷತೆಯನ್ನು ಗುರುತಿಸಬೇಕಾದುದು ಇಲ್ಲಿ. ಪಂಡಿತ್ ನೆಹರೂರವರ ಹೆಸರಿನ ಅಭಿಯಾನಕ್ಕಾಗಿ ಸರ್ಕಾರವು ಧಾರಾಳ ಖರ್ಚು ಮಾಡಿದ್ದರೂ ಅವರ ರಾಜಕೀಯ ಸ್ಥಾನ ಮಾನವಾಗಲಿ, ಅಬ್ಬರದ ಪ್ರಚಾರವಾಗಲಿ, ಅಪೇಕ್ಷಿಸಿದಷ್ಟು ಪ್ರಮಾಣದಲ್ಲಿ ಜನಮಾನಸವನ್ನು ಸ್ಪಂದಿಸುವುದರಲ್ಲಿ ವಿಫಲಗೊಂಡಿತ್ತು. ತದ್ವಿರುದ್ಧವಾಗಿ ಸಂಘವು ನಡೆಸಿದ ಅಭಿಯಾನದಲ್ಲಿ ಸ್ವಯಂ ಸೇವಕರು ತಮ್ಮ ಇತಿಮಿತಿಯಲ್ಲಿ ಸೀಮಿತ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಬಳಸಿ ಲಕ್ಷಾಂತರ ಗ್ರಾಮ, ನಗರಗಳಿಗೆ, ಮನೆಮನೆಗಳಿಗೆ ತಲುಪಿ ಡಾ॥ ಹೆಡಗೆವಾರರ ವ್ಯಕ್ತಿತ್ವ , ಕಾರ್ಯ ಇತ್ಯಾದಿ ತಿಳಿಸಿದ ಕಾರಣದಿಂದಾಗಿ ಅವರ ವಿಚಾರಕ್ಕೆ ಜನನಾಡಿಯೂ ಸಹ ಮಿಡಿದಿತ್ತು. ಹೀಗಾಗಿ ಸ್ವಯಂಸೇವಕರು ನಡೆಸುವ ಸಮಾಜ ಸೇವಾಕಾರ್ಯಗಳಿಗಾಗಿ ಜನರೇ ರೂ 12ಕೋಟಿಯಷ್ಟು ಸೇವಾನಿಧಿಯನ್ನು ಕೊಟ್ಟರು.

ಇವೆರಡೂ ಪ್ರಸಂಗಗಳನ್ನು ಉಲ್ಲೇಖಿಸಿದ್ದುದು ಅವರ ಮಹಾನತೆಗಳನ್ನು ಹೋಲಿಸಿ, ಹೆಚ್ಚುಗಾರಿಕೆ ಯಾರದೆಂಬುದರ ತೀರ್ಪು ನೀಡುವ ಉದ್ದೇಶದಿಂದಲ್ಲ. ಮಹಾಪುರುಷ ರೆನಿಸುವವರೆಲ್ಲರಲ್ಲೂ ಅವರವರದೇ ರೀತಿಯಲ್ಲಿ ಹೆಚ್ಚುಗಾರಿಕೆ ಇದ್ದೇ ಇರುತ್ತದೆ. ಕೆಲವರಲ್ಲದು ಸಾಮಾನ್ಯವಾಗಿ ಎದ್ದು ಕಾಣಿಸು ವಂತಿದ್ದಲ್ಲಿ, ಇನ್ನು ಕೆಲವರಲ್ಲದು ಕಣ್ಣಿಗೆ ಕಾಣಿಸದಂತಿರುವುದು ಸಹ ಸಾಧ್ಯ. ಡಾ॥ ಹೆಡಗೆವಾರ್‌ರಲ್ಲಿದ್ದ ಮಹಾನತೆ ಎರಡನೇ ರೀತಿಯದು. ಅವರು ಬದುಕಿದ್ದಾಗ ಅಗೋಚರವಾಗಿದ್ದ ಅದು, ಮುಂದೆ ಭವಿಷ್ಯದ ಮೇಲೆ ದೀರ್ಘ ನೆರಳು ಬೀರುವಂತಹದಾಗಿತ್ತು. ಅದು ಬೆಳಕಿಗೆ ಬಂದಿದ್ದುದು ಸ್ವಯಂ ಸೇವಕರು ಪ್ರಯತ್ನಪೂರ್ವಕ ಸುಮಾರು ಗ್ರಾಮಗಳವರೆಗೆ, ಮನೆಮನೆಗಳ ವರೆಗೆ ತಲುಪಿ ಜನರಿಗೆ ಮುಟ್ಟುವ ಶೈಲಿಯಲ್ಲಿ ಅದನ್ನು ತಿಳಿಸಿದಾಗಲೇ. ಡಾ॥ ಹೆಡಗೆವಾರರ ಈ ಅನನ್ಯತೆಯನ್ನು ನಾವು ಗುರುತಿಸಬೇಕಾದ ಅಗತ್ಯವಿದೆ.

ಅವರೋರ್ವ ಸ್ವಾತಂತ್ರ್ಯ ಹೋರಾಟಗಾರರಾಗಿದ್ದವರು. ಆರಂಭದಲ್ಲಿ ಕ್ರಾಂತಿಕಾರಿಯಾಗಿದ್ದು, ಮುಂದಿನ ಕಾಂಗ್ರೆಸ್ ನೇತೃತ್ವದ ಆಂದೋಲಗಳಲ್ಲೂ ಕ್ರಿಯಾಶೀಲವಾಗಿ ಸಹಭಾಗಿ ಯಾಗಿದ್ದವರು. ಆದರೆ ಸ್ವಾತಂತ್ರ್ಯದ ಕುರಿತ ಅವರ ಕಲ್ಪನೆ ಪರಕೀಯರ ಕೈಗಳಿಂದ ಸ್ವಕೀಯರ ಕೈಗಳಿಗೆ ಕೇವಲ ಅಧಿಕಾರದ ಹಸ್ತಾಂತರವಷ್ಟೇ ಎಂದಾಗಿರಲಿಲ್ಲ. ಅದಂತೂ ಆಗಲೇ ಬೇಕಾದುದೆಂಬುದು ನಿಜವೇ. ಆದರೆ ಅಧಿಕಾರದ ಹಸ್ತಾಂತರ ವನ್ನೇ ಸ್ವಾತಂತ್ರ್ಯವೆನ್ನಲಾಗುವುದಿಲ್ಲ. ಅದು ಅತಿ ಹೆಚ್ಚೆಂದರೆ ಸ್ವರಾಜ್ಯವಾಗಬಹುದು, ಸ್ವಾತಂತ್ರ್ಯವಲ್ಲ. ಸ್ವಾತಂತ್ರ್ಯದ ತಿರುಳಿರುವುದು 'ಸ್ವ'ತ್ವದಲ್ಲಿ, ರಾಷ್ಟ್ರ ಜೀವನದಲ್ಲಿ 'ನಮ್ಮತನದ' ಪ್ರಕಟೀಕರಣದಲ್ಲಿ. ಸ್ವರಾಜ್ಯ ಪ್ರಾಪ್ತಿ ಸ್ವಾತಂತ್ರ್ಯದ ಸಾಧನೆಯಲ್ಲಿ ಒಂದು ಮಧ್ಯಂತರ ಹೆಜ್ಜೆ ಅಷ್ಟೆ. ಒಂದು ರಾಷ್ಟ್ರವು ನಿಜಾರ್ಥದಲ್ಲಿ ಸ್ವತಂತ್ರವೆನಿಸುವುದು ಸ್ವರಾಜ್ಯಪ್ರಾಪ್ತಿಯ ನಂತರ ತನ್ನ ಸಾಮಾಜಿಕ ಜೀವನದ ಪ್ರತಿಯೊಂದು ರಂಗದಲ್ಲೂ ಸ್ವತ್ವದ ವಿಕಾಸದಿಂದ ನಮ್ಮತನದ ಅರಳುವಿಕೆಯಿಂದ ಮಾತ್ರ ಎಂಬಂತೆ ತಿಳಿಯುತ್ತಿದ್ದವರು ಡಾ॥ ಹೆಡಗೆವಾರರು.

ಅಂತಹ ಸ್ವಾತಂತ್ರ್ಯದ ಸಾಧನೆಗಾಗಿ ನಮ್ಮ ಪ್ರತಿಯೊಬ್ಬ ರಾಷ್ಟ್ರಕನನ್ನು ರಾಷ್ಟ್ರೀಯ ಅಸ್ಮಿತೆಯ 'ಸ್ವ'ತ್ವದ ಭಾವದಿಂದ ಓತಪ್ರೋತಗೊಳಿಸಬೇಕಾಗಿದೆ ಎಂಬ ತಮ್ಮ ಮನದಾಳದ ತುಡಿತವೇ ಅವರಿಗೆ ಸಂಘದ ಸ್ಥಾಪನೆಗೆ ಮುಖ್ಯ ಪ್ರೇರಣೆಯಾಯಿತು. ಅದರ ಫಲವಾಗಿ ಅವರ ಕಲ್ಪನೆಯಿಂದ ಮೂಡಿ ಬಂದ ಸಂಘದ ನಿತ್ಯ ಶಾಖೆಗಳೇ ಈ ದಿಕ್ಕಿನಲ್ಲಿ ಜನ ಸಾಮಾನ್ಯರನ್ನು ಸಂಸ್ಕರಿತಗೊಳಿಸಿ ರೂಪಿಸುವ ಶಕ್ತಿಕೇಂದ್ರ ಗಳಾದವು.

ಸಾಮಾನ್ಯ ವ್ಯಕ್ತಿಯೊಬ್ಬನನ್ನು ಶ್ರೇಷ್ಠ ಧ್ಯೇಯವೊಂದರ ಸಲುವಾಗಿ ರೂಪಿಸಲು ಅಗತ್ಯವೆನಿಸುವ ಮೂರು ಸಂಸ್ಕಾರ ಪ್ರಧಾನ ಸೂತ್ರಗಳನ್ನು ಮನಶ್ಶಾಸ್ತ್ರದಲ್ಲಿ ಹೇಳಲಾಗಿದೆ.

1. ಆ ಧ್ಯೇಯದ ಕುರಿತು ಅವನ ನಿರಂತರ ಚಿಂತನೆ
2. ತದನುಗುಣವಾದ ಚಟುವಟಿಕೆಗಳಲ್ಲಿ ಅವನು ತನ್ನ ಶರೀರ, ಮನ, ಬುದ್ಧಿಗಳನ್ನು ತೊಡಗಿಸಿಕೊಳ್ಳುವಿಕೆ.
3. ಅದೇ ವಿಧದ ಚಿಂತನೆ ಮತ್ತು ಚಟುವಟಿಕೆಗಳಲ್ಲಿ ಸದಾ ನಿರತರಾಗಿರುವ ಸಹಕಾರಿಗಳ ಜತೆ ಅವನ ಸತತವಾದ ಸಹವಾಸ.

ಸಂಘದ ಎಲ್ಲಾ ಶಾಖೆಗಳಲ್ಲಿನ ಒಂದು ಘಂಟೆ ಕಾಲಾವಧಿಯ ವೈವಿಧ್ಯಪೂರ್ಣ ಚಟುವಟಿಕೆಗಳಲ್ಲಿ ಈ ಸಂಸ್ಕಾರಕ್ಷಮ ತ್ರಿಸೂತ್ರಗಳಿಗನುಗುಣವಾಗಿ ಇರುವಂತಹವು.

ನಿತ್ಯ ನಿಯಮಿತವಾಗಿ ನಿಶ್ಚಿತ ಸಮಯದಲ್ಲಿ ಒಂದು ಸ್ಥಾನದಲ್ಲಿ ಒಂದುಗೂಡಿಬಂದು, ಅಲ್ಲಿ ಸಾಮೂಹಿಕವಾಗಿ ಸೂರ್ಯನಮಸ್ಕಾರ ಮತ್ತು ಇನ್ನಿತರ ವಿವಿಧ ವ್ಯಾಯಾಮಾದಲ್ಲಿ, ಸ್ವದೇಶಿ ಆಟಗಳಲ್ಲಿ, ಪರಸ್ಪರ ಹೆಜ್ಜೆಗೂಡಿಸಿ ಮಾಡುವ ಸಂಚಲನದಲ್ಲಿ, ಹೃದಯಭಾವನೆಗಳನ್ನು ಒಗ್ಗೂಡಿಸಿ ದೇಶ ಭಕ್ತಿ ಪ್ರಧಾನ ಗೀತೆಗಳನ್ನು ಹಾಡುವುದರಲ್ಲಿ, ದೇಶಹಿತಕ್ಕಾಗಿ ಸಮರ್ಪಿತರಾಗಬೇಕೆಂಬ ಸಂಕಲ್ಪದೊಂದಿಗೆ ಒಕ್ಕೊರಲಿನಿಂದ ಪ್ರಾರ್ಥನೆ ಹೇಳುವುದರಲ್ಲಿ ಸ್ವಯಂಸೇವಕರು ಮನತುಂಬಿ ಪಾಲ್ಗೊಳ್ಳುವಿಕೆ ಇವೆ ನಿತ್ಯ ಶಾಖೆಯ ಒಂದು ಘಂಟೆಯ ಚಟುವಟಿಕೆಗಳು. ಇವು ಮೇಲೆ ಹೇಳಲಾಗಿರುವ ತ್ರಿಸೂತ್ರಗಳದೇ ಅಭಿವ್ಯಕ್ತಿಗಳಲ್ಲದೇ ಬೇರೇನೂ ಅಲ್ಲ.

ಸಂಘದ ನಿತ್ಯ ಶಾಖೆ ಒಂದು ವಿದ್ಯುತ್ ಕೇಂದ್ರ. (power house) ಇದ್ದಂತೆ. ಅಲ್ಲಿ ಸದಾ ತಿರುಗುತ್ತಲೇ ಇರುವ ಚಕ್ರವೊಂದು (Turbine) ವಿದ್ಯುತ್ ಉತ್ಪಾದಿಸುವ ಕೆಲಸ ಮಾಡುತ್ತದೆ. ಹೀಗೆ ಉತ್ಪಾದಿತವಾದ ವಿದ್ಯುತ್ ದೀಪಗಳನ್ನು ಬೆಳಗಿಸುವ,

ಪುಟ 8 ಕ್ಕೆ ➢

➢ ಪುಟ 7 ರಿಂದ..... **ಸಂಘ ಶಾಖೆ**

ಫ್ಯಾನ್ ಗಳನ್ನು ತಿರುಗಿಸುವ, ರೇಡಿಯೋ, ಟಿವಿಗಳಿಗೆ ಚಾಲನೆ ನೀಡುವ, ಕಾರ್ಖಾನೆಗಳಲ್ಲಿ ಯಂತ್ರಗಳನ್ನು ನಡೆಸುವ, ಆಸ್ಪತ್ರೆಗಳಲ್ಲಿ ಶಸ್ತ್ರಕ್ರಿಯೆಗೆ ನೆರವಾಗುವ ಇತ್ಯಾದಿ ನೂರೆಂಟು ವಿಧದ ಕೆಲಸಗಳನ್ನು ನಿರ್ವಹಿಸುತ್ತದೆ. ಒಂದು ರೀತಿಯಲ್ಲಿ ನಮ್ಮ ಜನಜೀವನದ ಎಲ್ಲಾ ವ್ಯವಹಾರಗಳಿಗೂ ಅದೇ ಪ್ರಾಣಶಕ್ತಿಯಾಗಿದೆ. ವಾಸ್ತವಿಕವಾಗಿ power house ನಲ್ಲಿ ನಡೆಯುವುದು Turbine ನ ತಿರುಗುವ ಕಾರ್ಯ ಮಾತ್ರ. ಆದರೆ ನಾವು ನಿತ್ಯ ಜೀವನದಲ್ಲಿ ಕಾಣುವ ನೂರಾರು ವಿಧದ ಕೆಲಸಗಳಿಗೆ ಚೈತನ್ಯವೊದಗಿಸುವುದು ಅದರ ಈ ತಿರುಗುವಿಕೆಯೇ. ಸಂಘದ ಶಾಖೆಯೂ ಅಷ್ಟೇ. ಅಲ್ಲಿ ನಡೆಯುವುದು ಕೇವಲ ಸರಳ ಸಂಸ್ಕಾರ ಪೂರ್ಣ ಕಾರ್ಯಕ್ರಮಗಳು ಮಾತ್ರ. ಆದರೆ ಅವುಗಳಿಂದ ತಯಾರಾಗುವ ಸ್ವಯಂಸೇವಕರು ರಾಷ್ಟ್ರೀಯ ಅಸ್ಮಿತೆಗನುಗುಣವಾಗಿ ಸಮಾಜ ಜೀವನವನ್ನು 'ಸ್ವ'ತ್ವ ಸಂಪನ್ನಗೊಳಿಸುವುದರಲ್ಲಿ ಕ್ರಿಯಾಶೀಲರಾಗಿ ಅದರಲ್ಲಿ ಪರಿವರ್ತನೆ ತರುವುದರಲ್ಲಿ ಸಫಲರಾಗುತ್ತಾರೆ.

ಡಾ॥ ಹೆಡಗೆವಾರರ ಅನನ್ಯತೆಯನ್ನು ಗುರುತಿಸಬೇಕಾದುದು ಇಲ್ಲಿ. ಅವರು ನಿಧನರಾಗಿ ಈಗ 75 ವರ್ಷಗಳು ಕಳೆದರೂ ಅವರ ವ್ಯಕ್ತಿತ್ವದ ಮತ್ತು ಕರ್ತೃತ್ವದ ನೆರಳು ನಮ್ಮ ರಾಷ್ಟ್ರ ಜೀವನದಲ್ಲಿ ಇಂದಿಗೂ ಉಳಿದಿರುವಷ್ಟೇ ಅಲ್ಲ, ಮುಂದೆಯೂ ಅಧಿಕಾಧಿಕವಾಗಿ ಬೆಳೆಯುತ್ತಲೇ ಹೋಗಲಿರುವುದು ಈ ಕಾರಣಕ್ಕಾಗಿ. ●

➢ ಪುಟ 3 ರಿಂದ..... **ಯುಗಾದಿ**

ಮಾತ್ರ ತಯಾರಿಸಿ ನಿವೇದನ ಮಾಡುತ್ತಾರೆ. ಇದನ್ನು ಸೇವಿಸಿದ ನಂತರವೇ ಉಳಿದ ಆಹಾರದ ಸೇವನೆ.

ವೈಜ್ಞಾನಿಕ ದೃಷ್ಟಿಯಿಂದ ವಿಶ್ಲೇಷಿಸಿದರೆ, ಬೇವಿನ ಔಷಧೀಯ ಗುಣಗಳ ಬಗೆಗೆ ಸುಮಾರು 4500 ವರ್ಷಗಳ ಹಿಂದಿನ ಸಂಸ್ಕೃತ ಗ್ರಂಥಗಳಲ್ಲಿ ಕೂಡ ಪ್ರಸ್ತಾಪಿಸಲಾಗಿದೆ. 'ಮಾನವನಿಗೆ ಪ್ರಕೃತಿಯ ವರದಾನ' ಎಂದೇ ಬೇವನ್ನು ಕುರಿತು ಹೇಳುತ್ತಾರೆ. ಬೇವು ಅಸ್ಥಿಗತವಾದ ರೋಗವನ್ನೂ, ವಿಷದ ಸೋಂಕನ್ನೂ ನಿವಾರಿಸುವ ಮಹೌಷಧಿ. 'ಶತಾಯುರ್ವಜ್ರದೇಹಾಯ' ಎಂಬುದು ಇದನ್ನೇ ಹೇಳುತ್ತದೆ. ಸೋರಿಯಾಸಿಸ್, ಮಧುಮೇಹ, ಕ್ಯಾನ್ಸರ್, ಹೃದ್ರೋಗ, ಹರ್ಪಿಸ್ ಮುಂತಾದ ಸಮಸ್ಯೆಗಳಿಗೆ ಬೇವಿನ ಎಲೆಗಳನ್ನು ಬಳಸಿ ಔಷಧಿ ತಯಾರಿಸುವ ವಿಧಾನ ಆಯುರ್ವೇದ ವಿಜ್ಞಾನದಲ್ಲಿದೆ. ಈ ಎಲೆಗಳಲ್ಲಿ ವಿಟಮಿನ್-ಇ ಅಪಾರ ಪ್ರಮಾಣದಲ್ಲಿರುತ್ತದೆ. ಇವುಗಳ ಬಳಕೆಯಿಂದ ಚರ್ಮ ಸುಕ್ಕುಗಟ್ಟುವುದನ್ನು ತಡೆಯಬಹುದು. ಹೀಗೆ ಸುಮಾರು ನೂರಕ್ಕೂ ಹೆಚ್ಚು ಬಗೆಯ ಆರೋಗ್ಯ ಸಮಸ್ಯೆಗಳಿಗೆ ಬೇವಿನ ಎಲೆ, ಹೂವು, ಎಣ್ಣೆ ಮುಂತಾದ ಪದಾರ್ಥಗಳು ಉಪಯುಕ್ತವಾಗಿದೆ. ಕಹಿಯಾಗಿರುವ ಬೇವಿನ ಎಲೆಯಲ್ಲಿ ವಾತದ ದೋಷವಿರುವುದರಿಂದ ಸಿಹಿಯಾದ ಬೆಲ್ಲದೊಡನೆ ಸೇವಿಸಿದರೆ ಆ ದೋಷವು ಶಮನಗೊಳ್ಳುತ್ತದೆ. ಬೆಲ್ಲದ ಸೇವನೆ ಅನೀಮಿಯಾ, ಅಸ್ತಮಾ, ಸಂದುನೋವಿನ ಪರಿಹಾರಕ್ಕೆ, ರಕ್ತಶುದ್ಧಿಗೆ, ಜೀರ್ಣಕ್ರಿಯೆಗೆ ಸಹಕಾರಿಯೆಂದು ವೈದ್ಯಶಾಸ್ತ್ರದಲ್ಲಿ ಗುರುತಿಸಲಾಗಿದೆ. ಇನ್ನು ಈ ಬೇವು-ಬೆಲ್ಲ ಎಂಬ ಮಿಶ್ರಣದ ಕುರಿತು ಭಾವನಾತ್ಮಕವಾಗಿ ಆಲೋಚಿಸಿದರೆ, ಜೀವನದ ಸಿಹಿ, ಕಹಿಗಳನ್ನು ಸಮನಾಗಿ ಭಾವಿಸಿ ಸ್ವೀಕರಿಸಬೇಕೆಂಬ ಆದರ್ಶಗುಣದ ಬೋಧನೆ ಇಲ್ಲಿದೆ. ಈ ಮಿಶ್ರಣ ಯುಗಾದಿಯ ದೇವತೆಯಾದ ಪ್ರಜಾಪತಿಗೆ ಅತಿಪ್ರಿಯವಾದುದೆಂಬ ನಂಬಿಕೆಯೂ ಇದೆ.

ಯುಗಾದಿಯ ದಿನ ಬಂಧು ಮಿತ್ರರೊಡನೆ ಭೋಜನಾ ನಂತರ ಸಂಜೆಯ ಮತ್ತೊಂದು ಪ್ರಮುಖ ಕಾರ್ಯವೇ 'ಪಂಚಾಂಗಶ್ರವಣ' ತಿಥಿ, ವಾರ, ನಕ್ಷತ್ರ, ಯೋಗ, ಕರಣ ಇವುಗಳು ಕಾಲಕೋಶದ ಪಂಚಾಂಗಗಳು. ಇದರಲ್ಲಿ ತಿಳಿಸಿರುವ ವಿಚಾರಗಳನ್ನು ತಿಳಿದು ಇಡೀ ಸಂವತ್ಸರದ ಫಲಾಫಲಗಳನ್ನು ಹೊಂದಿಸಿದಂತೆ ವರ್ಷದ ಕಾರ್ಯಭಾರಕ್ಕೆ ಯೋಜನೆ ಹಾಕಿಕೊಳ್ಳಲು ಈ ಪಂಚಾಂಗಶ್ರವಣ ಸಹಕಾರಿಯಾಗುತ್ತದೆ. ಪ್ರತಿಯೊಬ್ಬರ ನಕ್ಷತ್ರಕ್ಕೆ ಅನುಗುಣವಾಗಿ ಅವರವರ ವರ್ಷದ ಭವಿಷ್ಯವನ್ನು ಈ ಪಂಚಾಂಗದ ಮೂಲಕ ತಿಳಿಯುವುದು ಅಂದಿನ ಸಂಪ್ರದಾಯವಾಗಿದೆ. ಪಂಚಾಂಗ ಶ್ರವಣ ಮಾಡಿಸುವವರಿಗೆ ಕೃತಜ್ಞತೆಯಿಂದ ಯೋಥೋಚಿತವಾಗಿ ಸಂಭಾವನೆ ಮಾಡುವುದು ಕೂಡ ಯುಗಾದಿ ಆಚರಣೆಯ ಒಂದು ಮುಖ್ಯ ಅಂಗವಾಗಿದೆ.

ಎಲ್ಲ ರೀತಿಗಳಲ್ಲಿ ಸಂಪೂರ್ಣವಾಗಿ ಸಕಾರಾತ್ಮಕ ಅಂಶಗಳನ್ನು ಒಳಗೊಂಡಿದ್ದು, ಸತ್ಯಕ್ಕೆ ಅನುಗುಣವಾಗಿ, ಧರ್ಮಮಯವಾದ ಜೀವನವನ್ನು ಪ್ರಾರಂಭಿಸುವುದಕ್ಕೆ ತಕ್ಕ ಸ್ವರೂಪವನ್ನು ಹೊಂದಿರುವುದರಿಂದಲೇ ಈ 'ಯುಗಾದಿ'ಯನ್ನು 'ಸತ್ಯಯುಗದ ಆದಿ' ಎಂದೂ ಪ್ರಾಜ್ಞರು ಹೇಳುತ್ತಾರೆ.

**ಎಲ್ಲರಿಗೂ ಯುಗಾದಿಯ ಶುಭಾಶಯಗಳು** ●

## ವಿದ್ಯಾರ್ಥಿ ಮಿತ್ರ – 16 ರ ಉತ್ತರ

**1. ರಸಪ್ರಶ್ನೆ** : 1) ತಾ. ವೆಂ. ಆಚಾರ್ಯ ; 2) ರತನ್ ಟಾಟಾ ; 3) ನಾಸಾ ; 4) ಇಪ್ಪತ್ತೇಳು ವರ್ಷಗಳು ; 5) ಆಂಧ್ರಪ್ರದೇಶ ; 6) ಕೋಣಾರ್ಕ್ ಸೂರ್ಯ ದೇವಾಲಯ ; 7) ಅಬುದಾಭಿ ; 8) ನ್ಯೂಯಾರ್ಕ್ ; 9) ನಾಗ್ಪುರ ; 10) ಒಂಟೆ.

**ನಾವು ಸರಿಯಾಗಿದ್ದಾಗಲೂ, ತಪ್ಪನ್ನು ಒಪ್ಪಿಕೊಳ್ಳುವಾಗಲೂ ಕೋಪಕ್ಕೆ ಅವಕಾಶ ಕೊಡದಿದ್ದರೆ, ಅನರ್ಥಗಳು ಅರ್ಧಕ್ಕರ್ಧ ಕಡಿಮೆಯಾಗಿ ಬಿಡುತ್ತದೆ.**

# ಸಂಸ್ಕೃತಿ ಮತ್ತು ಮಹಿಳೆ




ನಂ. ಲಕ್ಷ್ಮಿ
ಮತ್ತು
ಬಿ.ಕೆ ರಮ್ಯ
ಬೆಂಗಳೂರು

ಸಂಸ್ಕೃತಿ ಮತ್ತು ಮಹಿಳೆ ಒಂದು ನಾಣ್ಯದ ಎರಡು ಮುಖಗಳೆಂದೇ ಹೇಳಬಹುದು. ತನ್ನ ಬದುಕಿನಲ್ಲಿ ಮಗಳಾಗಿ, ತಂಗಿಯಾಗಿ (ಅಕ್ಕನಾಗಿಯೂ), ಪತ್ನಿಯಾಗಿ, ತಾಯಿಯಾಗಿ ವಿಭಿನ್ನ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುವ ಶಕ್ತಿಯಿರುವ ಮಹಿಳೆ ತನ್ನ ಜೀವನದುದ್ದಕ್ಕೂ ಸಂಸ್ಕೃತಿಯ ಹರಿಕಾರಳೇ ಆಗಿರುತ್ತಾಳೆ. ಪ್ರತೀ ಹಂತದಲ್ಲಿ ಆಕೆಯ ವ್ಯಕ್ತಿತ್ವದಲ್ಲಿ ಕಾಣಬರುವ ಪ್ರಬುದ್ಧತೆ ಅಚ್ಚರಿಯನ್ನುಂಟುಮಾಡುವಂತಹುದೇ, ಒಂದು ಮನೆಯಲ್ಲಿ ಹುಟ್ಟಿ ಮತ್ತೊಂದು ಮನೆಯನ್ನು ಬೆಳಗುವ ಹೆಣ್ಣಿನ ವ್ಯಕ್ತಿತ್ವದ ಹಿರಿಮೆ ಯಾವ ಕಾಲಕ್ಕೂ ಗೌರವಿಸುವಂತಹುದೇ. ಅದಕ್ಕೇ ಸಂಸ್ಕೃತಿ ಎಂದೊಡನೆ ಹೆಣ್ಣು ಎಂಬ ಶಬ್ದ ನೆನಪಾಗುತ್ತದೆ. ಹೆಣ್ಣಿನ ಅವಿಭಾಜ್ಯ ಅಂಗವೇ 'ಸಂಸ್ಕೃತಿ' ಎಂದರೂ ತಪ್ಪಾಗಲಾರದು. ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ ಎಂಬ ಸೂಕ್ತಿ ಇದೆಯಲ್ಲ.

'ತಾಯಿಯೇ ಮಗುವಿಗೆ ಮೊದಲ ಗುರು' ಎಂಬ ಮಾತು ಎಲ್ಲರಿಗೂ ತಿಳಿದದ್ದೇ. ಒಂದು ಒಳ್ಳೆಯ ವ್ಯಕ್ತಿತ್ವ ರೂಪು ಗೊಳ್ಳಬೇಕಾದರೆ ಅಲ್ಲಿ ತಾಯಿಯ ಪಾತ್ರ ತುಂಬ ಮಹತ್ತ್ವದ್ದು. ಇದನ್ನು ನಿರೂಪಿಸುವ ಅನೇಕ ದೃಷ್ಟಾಂತಗಳನ್ನು ನಮ್ಮ ಪುರಾಣಗಳಲ್ಲಿ, ಇತಿಹಾಸದಲ್ಲಿ ಕಾಣುತ್ತೇವೆ. ಉದಾಹರಣೆಗೆ ವಿಜಯನಗರದ ಪ್ರೌಢಪ್ರತಾಪದೇವರಾಯನ ಕಾಲದಲ್ಲಿ ರಚಿತವಾದ ಶಾಸನದ ಒಂದು ಪದ್ಯದಲ್ಲಿ ಮಂತ್ರಿ ಲಕ್ಷ್ಮೀಧರನು ಮಹಾಗಣಪತಿಯನ್ನು ಸ್ಥಾಪಿಸಿ, ಅದಕ್ಕೆ ದತ್ತಿಯನ್ನು ಬಿಟ್ಟ ಸಂಗತಿ ಆ ಶಾಸನದಲ್ಲಿ ಉಕ್ತವಾಗಿದೆ. ಆತ ಮಗುವಾಗಿದ್ದಾಗ ಅವನ ತಾಯಿ ಹಾಲೆರೆಯುತ್ತ ಕಿವಿಯಲ್ಲಿ ಉದಾತ್ತ ವಿಚಾರದ ಸಂಸ್ಕೃತಿಯನ್ನೂ ರಕ್ತಗತವಾಗುವಂತೆ ಎರೆದಳೆಂದು ಕವಿ ವರ್ಣನೆ ಮಾಡಿದ್ದಾನೆ. 'ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿಸಜ್ಜರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದರ್ಗೆರೆವಟ್ಟಾಗಿರು ಶಿಷ್ಟರಂ ಪೊರೆ ಎನುತ್ತಿಂತೆಲ್ಲಮಂ ಪಿಂದೆತಾ ನೆರೆದಳ್ ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ'॥

ಮಕ್ಕಳಿಗೆ ಇದಕ್ಕಿಂತ ಹೆಚ್ಚು ಸಂಸ್ಕೃತಿಯ ಪಾಠ ಬೇರಿನ್ನೇನಿರುತ್ತದೆ? ನಿಸ್ವಾರ್ಥಿಯಾಗಿ, ಸಮಾಜಮುಖಿಯಾಗಿ ಬಾಳಬೇಕೆಂಬ ಬೋಧನೆಗಿಂತ ಹೆಚ್ಚಾಗಿ ಸಂಸ್ಕೃತಿಯ ಮೂಲಪಾಠ ಇನ್ನೇನು ಹೇಳಲು ಸಾಧ್ಯ?

ಜಾನಪದ ಸಾಹಿತ್ಯ ನಮ್ಮ ಸಂಸ್ಕೃತಿಯ ತಾಯಿಬೇರಿದ್ದಂತೆ. ಅದರಲ್ಲಿ ಕೂಡ ಹೀಗೆಯೇ ಸಂಸ್ಕೃತಿಯ ಪಾಠ ಕಲಿಸುವ ಹಳ್ಳಿಯ ಹೆಣ್ಣು ಮಗಳ ಪ್ರಸ್ತಾಪವಿದೆ. 'ಆಚಾರಕ್ಕರಸಾಗು, ನೀತಿಗೆ ಪ್ರಭುವಾಗು, ಮಾತಿನಲಿ ಚೂಡಾಮಣಿಯಾಗು, ನನಕಂದ ಜ್ಯೋತಿ ನೀನಾಗು ಜಗಕೆಲ್ಲಾ॥

ಅಕ್ಷರಸ್ಥೆಯಲ್ಲದ, ವಿದ್ಯಾವಂತಳಲ್ಲದ ಈ ಹೆಣ್ಣಿನಲ್ಲಿ ಸಂಸ್ಕಾರದ, ಸಂಸ್ಕೃತಿಯ ಗುಣಗಳು ಜನ್ಮಜಾತವಾಗಿ ಬೇರೂರಿರುತ್ತದೆ. ತನ್ನ ಮಗ ಸದಾಚಾರಗಳನ್ನು ಪಾಲಿಸುತ್ತಾ, ನೀತಿ ನಿಯಮಗಳಿಗೇ ತಾನು ದೊರೆಯೆನ್ನುವಂತೆ ಆದರ್ಶವ್ಯಕ್ತಿತ್ವವನ್ನು ಬೆಳೆಸಿಕೊಂಡು ತನ್ನ ನುಡಿಮುತ್ತುಗಳು ಎಲ್ಲರಿಗೂ ಮಾರ್ಗದರ್ಶಕವೂ, ಅರ್ಥ ಪೂರ್ಣವೂ ಆಗಿರುವಂತೆ ಎಲ್ಲರೊಡನೆ ವ್ಯವಹರಿಸುತ್ತ ಜ್ಯೋತಿ ಸ್ವರೂಪಿಯಾಗಿ ಬದುಕುವಂತಾಗಲೆಂದು ಆ ತಾಯಿ ಆಶೀರ್ವದಿಸುತ್ತಾಳೆ.

ಇಂತಹ ಉದಾತ್ತ ಸಂಸ್ಕೃತಿಯ ಪಾಠವನ್ನು ಮನುಷ್ಯರಲ್ಲಿ ಮಾತ್ರವಲ್ಲ, ಪ್ರಾಣಿವರ್ಗದಲ್ಲಿ ಕೂಡ ತಾಯಿಜೀವ ತನ್ನ ಕಂದನಿಗೆ ಕಲಿಸುವುದೆಂಬ ವಿಚಾರವನ್ನು ಕಾಣುತ್ತೇವೆ. ಅದೇ ಎಲ್ಲರಿಗೂ ಚಿರಪರಿಚಿತವೂ ಅತ್ಯಂತ ಆತ್ಮೀಯವೂ ಆದ ಗೋವಿನ ಹಾಡಿನಲ್ಲಿ ಬರುವ ಪುಣ್ಯಕೋಟಿಯ ಪಾತ್ರದಲ್ಲಿ ಸತ್ಯವನ್ನು ಬಿಟ್ಟು ನಡೆಯುವುದು ಸಲ್ಲದು ಎಂಬ ಅದರ ಧ್ಯೇಯ. ಕೊಟ್ಟ ಮಾತನ್ನು ಉಳಿಸಿಕೊಳ್ಳಲು ತನ್ನ ಪ್ರಾಣತ್ಯಾಗ ಮಾಡುವ ಸಂಕಲ್ಪ ಹೊಂದಿ ತನ್ನ ಕಂದನಿಗೆ ಅದು ಹೇಳುವ ಮಾತಾದರೂ ಯಾವುದು?

'ಕೊಟ್ಟ ಭಾಷೆಗೆ ತಪ್ಪಲಾರೆನು। ಕೆಟ್ಟ ಯೋಚನೆ ಮಾಡಲಾರೆನು ನಿಷ್ಠೆಯಿಂದಲಿ ಪೋಗೆನಲ್ಲಿಗೆ। ಕಟ್ಟ ಕಡೆಗಿದು ಖಂಡಿತ॥

ಈ ಮಾತುಗಳಲ್ಲಿ ಅದೆಂತಹ ಉದಾತ್ತ ಸಂಸ್ಕೃತಿಯಿದೆ? 'ಸತ್ಯವೇ ನಮ್ಮ ತಾಯಿ ತಂದೆ, ಸತ್ಯವೇ ನಮ್ಮ ಬಂಧು ಬಳಗ, ಸತ್ಯವಾಕ್ಯಕೆ ತಪ್ಪಿನಡೆದರೆ ಮೆಚ್ಚನಾ ಪರಮಾತ್ಮನು'. ಗೋಮಾತೆ ಯಲ್ಲಿ ಇಂತಹ ಉನ್ನತ ವಿಚಾರಗಳು ತುಂಬಿರುತ್ತವೆಯೆಂಬ ಕವಿ ಕಲ್ಪನೆ ಎಷ್ಟು ಅದ್ಭುತವಾಗಿದೆ!

ಅದಕ್ಕೇ ಕವಿನುಡಿಯ ಮತ್ತೊಂದು ಹೇಳಿಕೆ ಇಲ್ಲಿ ಸ್ಮರಣೀಯ. ಕುಪುತ್ರನಿರುತ್ತಾನೆ, ದುಷ್ಟ ತಂದೆ ಇರುತ್ತಾನೆ, ಆದರೆ 'ಕುಮಾತಾ ಮಾತ್ರ ಇರುವುದಿಲ್ಲ. ಹೀಗೆ ಸಂಸ್ಕೃತಿಯ ಹರಿಕಾರಳಾಗಿ ಪಾತ್ರ ನಿರ್ವಹಿಸುವವಳಿಗೆ 'ಮಾತೃದೇವೋಭವ' ಎಂಬ ಮೊದಲ ಗೌರವ, ಮೊದಲ ಪೂಜೆ. ಇಂತಹ ಆದರ್ಶ ವ್ಯಕ್ತಿ ಶಿಕ್ಷಕಿಯಾದಾಗ ಕೂಡ ಆ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುವುದು ಅತ್ಯಗತ್ಯ. ಉತ್ತಮ ಸಂಸ್ಕಾರದೊಂದಿಗೆ ಬೆಳೆದು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸಂಸ್ಕೃತಿಯನ್ನು ಪ್ರತಿನಿಧಿಸುವ ವ್ಯಕ್ತಿಗಳಾಗಿ ಖ್ಯಾತಿ ಹೊಂದಿ ಬದುಕಿನ ಹಲವು ಆದರ್ಶ ವ್ಯಕ್ತಿಗಳನ್ನು ಸದಾ ಸ್ಮರಿಸುತ್ತೇವೆ. ಮನೆಯಲ್ಲಿ

ಪುಟ 10 ಕ್ಕೆ ➤

# ವಿದ್ಯಾರ್ಥಿ ಮಿತ್ರ – 17




## 1. ರಸಪ್ರಶ್ನೆಗೆ ಉತ್ತರಿಸಿರಿ.

1. ಮೊದಲ ರಾಷ್ಟ್ರೀಯ ಬುಡಕಟ್ಟು ಉತ್ಸವ 'ವಾನಾಜ್' ಎಲ್ಲಿ ನಡೆಯಿತು ?
2. ವೆಂಬನಾಡು ಕೋಲ್ ಸರೋವರ ಎಲ್ಲಿದೆ ?
3. ಭಾರತವು ಅಂತಾರಾಷ್ಟ್ರೀಯ ಬೌದ್ಧಿಕ ಆಸ್ತಿ ಸೂಚ್ಯಂಕದಲ್ಲಿ ಎಷ್ಟನೇ ಸ್ಥಾನದಲ್ಲಿದೆ ?
4. 'ಪಾಕೆಟ್' ಎಂಬ ಹೆಸರಿನಲ್ಲಿ ಮೊಬೈಲ್ ಫೋನ್‌ನಲ್ಲಿ ಡಿಜಿಟಲ್ ಬ್ಯಾಂಕಿಂಗ್ ಪ್ರಾರಂಭಿಸಿದ ಭಾರತದ ಮೊದಲ ಬ್ಯಾಂಕ್ ಯಾವುದು ?
5. ಸ್ಟಾಕ್ ಮಾರ್ಕೆಟ್‌ಗೆ ಖ್ಯಾತಿ ಹೊಂದಿರುವ ವಾಲ್‌ಸ್ಟ್ರೀಟ್ ಎಲ್ಲಿದೆ ?
6. 'ಆನಂದ ಮಠ' ಕೃತಿಯ ಕರ್ತೃ ಯಾರು ?
7. ಕರ್ನಾಟಕ ವಿಶ್ವವಿದ್ಯಾನಿಲಯ ಎಲ್ಲಿದೆ ?
8. 'ಮೌಂಟ್ ಅಬು' ಎಂಬ ಸ್ಥಳ ಯಾವ ರಾಜ್ಯದಲ್ಲಿದೆ ?
9. UTI ಎಂದರೇನು ?
10. 'ಕಬೀರ್ ಸಮ್ಮಾನ್' ಪ್ರಶಸ್ತಿಯನ್ನು ಯಾವ ರಾಜ್ಯದವರು ನೀಡುತ್ತಾರೆ ?
11. ಕಳೆದ ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದ ಆಸ್ಟ್ರೇಲಿಯಾದ ಪ್ರಧಾನಿ ಯಾರು ?
12. ಹಿಮಾಲಯದ ಯಾವ ನದಿಗೆ ವಿಶ್ವದ ಅತಿ ಎತ್ತರದ ರೈಲ್ವೇ ಸೇತುವೆ ನಿರ್ಮಿಸಲಾಗುತ್ತಿದೆ ?
13. ಜಪಾನ್ ತಂತ್ರಜ್ಞರು ಬಿಡುಗಡೆ ಮಾಡಿರುವ ಸುದ್ದಿ ಓದುವ ಅಂಡ್ರಾಯ್ಡ್ ಹೆಸರೇನು ?
14. ಶಿವಮೊಗ್ಗ ಜಿಲ್ಲೆಯಲ್ಲಿರುವ ಪ್ರಮುಖ ಬೆಟ್ಟ ಯಾವುದು ?
15. ಎಂಟಿಮಾಲಜಿ ಎಂದರೇನು ?

## 2. ಈ ಚಿತ್ರಗಳಲ್ಲಿರುವ ಯಂತ್ರಗಳನ್ನು ಗುರುತಿಸಬಲ್ಲಿರಾ ?













(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

➢ ಪುಟ 9 ರಿಂದ..... ಮಹಿಳೆ

ಪ್ರಾರಂಭವಾಗುವ ಸಂಸ್ಕೃತಿಯ ಪಾಠ ಶಾಲೆಯಲ್ಲಿನ ಶಿಕ್ಷಣದಲ್ಲಿ ಕೂಡ ಮುಂದುವರಿಯಬೇಕು. ಇದಕ್ಕೆ ಬೇಕಾದ ಸಹನೆ, ಇಂಗಿತಜ್ಞತೆ, ಕ್ಷಮಾಗುಣ, ವಾತ್ಸಲ್ಯ, ಕರುಣೆ ಮುಂತಾದ ಗುಣಗಳು ಇಲ್ಲಿ ಅವಶ್ಯವಾಗಿರುತ್ತವೆ. ಮಗುವಿನ ಮನಸ್ಸನ್ನು ತಿಳಿಯುವ ಸಾಮರ್ಥ್ಯ, ಬಾಲಿಶ ಕುತೂಹಲಗಳನ್ನು ಪೊರೆದು, ಪೋಷಿಸುವ ಜಾಣ್ಮೆ, ತಣಿಸುವ ವಿಚಾರಶಕ್ತಿ, ಮುಂಗೋಪವಿಲ್ಲದ ಶಾಂತಸ್ವಭಾವ ಎಲ್ಲದರೊಂದಿಗೆ ಮಗುವಿನ ಮನಸ್ಸನ್ನು ಗೆಲ್ಲುತ್ತ ಸಂಸ್ಕಾರ ಪೂರ್ಣ ವ್ಯಕ್ತಿಯಾಗಿ ಬೆಳೆಯಲು ಸಹಕರಿಸುವ ಹೊಣೆ ಶಿಕ್ಷಕಿಯದು. 'ಪ್ರೀತಿಯಿಲ್ಲದ ಮೇಲೆ ಅರಳೀತು ಹೇಗೆ' ಎಂಬ ಕವಿನುಡಿಯಂತೆ ಶಿಕ್ಷಕಿಯಲ್ಲಿನ ಮಾತೃವಾತ್ಸಲ್ಯದ ಮೂಲಗುಣವೇ ಆಕೆ ಉತ್ತಮ ಶಿಕ್ಷಕಿಯಾಗಿ ತನ್ನ ಕರ್ತವ್ಯ ನಿರ್ವಹಿಸಲು ನೆರವಾಗುತ್ತದೆ. ಸಂಸ್ಕಾರ ನೀಡದ ಶಿಕ್ಷಣ, ಅಂತಹ ಶಿಕ್ಷಣ ಪಡೆದ ವ್ಯಕ್ತಿ ಜಾಲಿಯ ಮರದಂತೆ.

ಅದಕ್ಕೇ ತಾಯಿ, ಸಂಸ್ಕೃತಿ, ಶಿಕ್ಷಣ, ಶಿಕ್ಷಕಿ ಎಲ್ಲವೂ ಒಂದಕ್ಕೊಂದು ಸರಪಳಿಯಂತೆ ಹೆಣೆದುಕೊಂಡಿರುವುದು. ಸಂಸ್ಕೃತಿ ಪಾಠದ ಸಾರವನ್ನು ಹೇಳಿದ ಒಂದು ಕವಿವಾಣಿ ಇಂತಿದೆ.

ಎತ್ತಿಕೊ ನಿನ್ನ ಕೈಗಳಲ್ಲಿ ಒಳ್ಳೆಯದನ್ನು।
ಕೆತ್ತಿಕೋ ನಿನ್ನ ಹೃದಯದಲ್ಲಿ ಒಳ್ಳೆಯದನ್ನು।
ಒತ್ತಿಕೊ ನಿನ್ನ ಕಣ್ಣಳಲ್ಲಿ ಒಳ್ಳೆಯದನ್ನು।
ಬಿತ್ತಿಕೊ ನಿನ್ನ ವಂಶದಲ್ಲಿ ಒಳ್ಳೆಯದನ್ನು.

**ನಮ್ಮ ಎಲ್ಲಾ ಮಹಿಳಾ ಶಿಕ್ಷಕಿಯರಿಗೆ ಅಂತರಾಷ್ಟ್ರೀಯ ಮಹಿಳಾ ದಿನದ ಶುಭಾಶಯಗಳು.**

(ಸಾಂದರ್ಭಿಕ ಲೇಖನ)

# ಸಾಧಕರನ್ನು ಸ್ಮರಿಸೋಣ



## ಚಾಪೇಕರ್ ಸಹೋದರರೆಂಬ ಸ್ವಾತಂತ್ರ್ಯದ ಹವಿಸ್ಸುಗಳು..!!

ಭಾರತದ ಸ್ವತಂತ್ರಪರ್ವವು, ಕೇವಲ ಶಾಂತಿ–ಅಹಿಂಸೆಯಿಂದಾಗಲೀ, ಅತ್ಯಂತ ಮೃದುಭಾವನೆಯ ಅರ್ಜಿಗಳಿಂದಾಗಲೀ ದೊರೆತಿದ್ದಲ್ಲ, ಬದಲಾಗಿ ಅಸಂಖ್ಯಾತ ಅಜ್ಞಾತ ತರುಣರ ರುಧಿರಾಭಿಷೇಕದಿಂದ ಎನ್ನುವುದು ಇತಿಹಾಸದ ಸತ್ಯ.ಕಾಲಗರ್ಭದಲ್ಲಿ ಅಂತಹ ವೀರರು ಮರೆಯಾಗಿರುವುದು ರಾಷ್ಟ್ರದ ದುರಂತವೇ ಸರಿ. ಹಾಗೆ ತೆರೆಯಲ್ಲಿ ಸರಿದ ಕ್ರಾಂತಿಕಾರಿಗಳಲ್ಲಿ ಚಾಪೇಕರ್ ಸಹೋದರರೂ ಕೂಡ ಅದ್ವಿತೀಯ ಸ್ಥಾನದಲ್ಲಿ ನಿಲ್ಲುತ್ತಾರೆ.ದಾಮೋದರ್ ಚಾಪೇಕರ್, ಬಾಲಕೃಷ್ಣ ಚಾಪೇಕರ್, ವಾಸುದೇವ ಚಾಪೇಕರ್ ಇವರೇ ಈ ಲೇಖನದ ನಾಯಕರು.

ಚಾಪೇಕರ್ ವಂಶದವರು ಮೂಲತಃ ಕೊಂಕಣ ಪ್ರಾಂತದವರಾಗಿದ್ದು, ಕಾಲಾನಂತರದಲ್ಲಿ ಮಹಾರಾಷ್ಟ್ರಕ್ಕೆ ವಲಸೆ ಬಂದಿದ್ದರು. ದಾಮೋದರ್ 1870 ರಲ್ಲಿ, ಬಾಲಕೃಷ್ಣನು 1873 ರಲ್ಲಿ, ವಾಸುದೇವನು 1879 ರಲ್ಲಿ ಹುಟ್ಟಿದರು. ಬಾಲ್ಯದಿಂದಲೂ ದೇಶಭಕ್ತಿಯನ್ನು ಮೈಗೂಡಿಸಿಕೊಂಡಿದ್ದ ಈ ಸಹೋದರರು ತಮ್ಮದೇ ಒಂದು ಸಣ್ಣ ಸಂಘವನ್ನು ಕಟ್ಟಿಕೊಂಡಿದ್ದರು. ಕ್ರಿಶ್ಚಿಯನ್ ಮಿಷಿನರಿಗಳ ಮತ್ತು ಆಂಗ್ಲರ ದಮನನೀತಿಗಳಿಂದ ರೋಸಿಹೋಗಿದ್ದ ಪ್ರಜೆಗಳಲ್ಲಿ ಇವರೂ ಒಬ್ಬರಾಗಿದ್ದರು.

ತಿಲಕರ ಕೇಸರಿ ಪತ್ರಿಕೆಯ ಲೇಖನಗಳಿಂದ ಮತ್ತಷ್ಟು ಉದ್ದೀಪನಗೊಂಡಿದ್ದ ಈ ತರುಣರು, ಬ್ರಿಟಿಷರ ರಾಣಿಯ ಮೂರ್ತಿಗಳಿಗೆ ಮಸಿ ಬಳಿಯುವುದು, ಆಂಗ್ಲರ ಪರೀಕ್ಷೆಗಳನ್ನು ಧಿಕ್ಕರಿಸುವುದು ಹೀಗೆ ತಮ್ಮ ಆಕ್ರೋಶಗಳಿಂದ ಜನರನ್ನೂ ಹುರಿದೆಬ್ಬಿಸುತ್ತಿದ್ದರು. ಗಣೇಶ ಹಬ್ಬದ ಮೇಳಗಳಲ್ಲಿ ದೇಶಭಕ್ತಿಯ ಕುರಿತಾದ ಉದ್ಬೋಧಕ ಗೀತೆಗಳನ್ನು ಹಾಡಿ, ಜನರ ಕಿಚ್ಚನ್ನು ಬಡಿದೆಬ್ಬಿಸುತ್ತಿದ್ದರು.

1896 ರಲ್ಲಿ ಮಹಾರಾಷ್ಟ್ರದಲ್ಲಿ ಪ್ಲೇಗ್ ರೋಗ ತನ್ನ ತಾಂಡವವನ್ನು ಶುರುಮಾಡಿತ್ತು. ಜನರು ರೋಗಕ್ಕೆ ತುತ್ತಾಗಿ ಮನೆ ಮಠಗಳನ್ನು ಕಳೆದುಕೊಂಡು ಅಕ್ಷರಶಃ ದಾರುಣ ಸ್ಥಿತಿಯಲ್ಲಿದ್ದರು. ಆಗ ‘ರಾಂಡ್’ ಎಂಬ ಅಧಿಕಾರಿಯು ಪೂನಾಕ್ಕೆ ವಿಶೇಷ ಅಧಿಕಾರಿಯಾಗಿ ಬಂದ. ಬಂದವನೇ ಅತ್ಯಂತ ಬರ್ಬರತೆಯಿಂದ ಆಡಳಿತ ನಡೆಸಲು ಪ್ರಾರಂಭಿಸಿದ. ಆತನ ಆಡಳಿತವನ್ನು ಕೇಸರಿ ಮೊದಲಾದ ಪತ್ರಿಕೆಗಳೆಲ್ಲ ವರದಿ ಮಾಡಿದವು. ಮೊದಲೇ ಆಂಗ್ಲರ ಬಗ್ಗೆ ಅಸಹನೆಯಿದ್ದ ಚಾಪೇಕರರಿಗೆ ಇದು ಮತ್ತಷ್ಟು ಕೋಪ ಬರಿಸಿತು. ಅಲ್ಲಿಗೆ ‘ರಾಂಡ್’ನ ವಧೆಯಾಗಲೆಬೇಕೆಂಬ ಭಾವ ನಿಶ್ಚಿತವಾಗಿತ್ತು.

ಜೂನ್ 22, 1897. ಇಂಗ್ಲೆಂಡ್‌ನ ರಾಣಿಯ ಪಟ್ಟಾಭಿಷೇಕವಾಗಿ 25 ವರ್ಷಗಳು ಸಂದಿದ್ದವು. ಆ ರಜತ ಮಹೋತ್ಸವದ ಅಂಗವಾಗಿ, ಆಂಗ್ಲರು ದೊಡ್ಡ ಸಮಾರಮ್ಭವನ್ನೇ ಏರ್ಪಡಿಸಿದ್ದರು. ಅದನ್ನೇ ಸರಿಯಾದ ದಿನವೆಂದು ಪರಿಗಣಿಸಿ, ಚಾಪೇಕರ್ ಸಹೋದರರು ಆ ಸಮಾರಂಭದ ಜಂಗುಳಿಯೊಳಗೆ ನುಗ್ಗಿದರು. ಮೊದಲೇ ಗುಂಡು ಹೊಡೆಯುವುದನ್ನು ತಯಾರಿ ಮಾಡಿಕೊಂಡಿದ್ದ ತರುಣರು ರಾಂಡ್ ನ ಬರುವಿಕೆಗೆ ಕಾದಿದ್ದರು.

ರಾಂಡ್ ಕಾರ್ಯಕ್ರಮದ ಅಂತ್ಯಕ್ಕೆ, ತನ್ನ ಗಾಡಿಯಲ್ಲಿ ಹೊರಕ್ಕೆ ಬರುತ್ತಿದ್ದ. ಸಮಯವನ್ನು ಗ್ರಹಿಸಿದ ದಾಮೋದರ, ಝುಗ್ಗನೆ ಒಳಕ್ಕೆ ನುಗ್ಗಿ ಗುಂಡು ಹಾರಿಸಿದ. ಆ ಹೊಡೆತಕ್ಕೆ ರಾಂಡ್ ಅಲ್ಲೇ ಸತ್ತ. ಜೊತೆಗಿದ್ದ ಮತ್ತೊಬ್ಬ ಅಧಿಕಾರಿಯೂ ಬಾಲಕೃಷ್ಣನ ಗುಂಡಿಗೆ ಸಾವನ್ನಪ್ಪಿದ. ಜನರಲ್ಲಿ ಗದ್ದಲ ಉಂಟಾಗುವ ಮೊದಲೇ ಮೂರೂ ಜನ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾದರು. ರಾಂಡ್‌ನ ಈ ವಧೆ, ಆಂಗ್ಲರ ಜಂಘಾಬಲವನ್ನೇ ಉಡುಗಿಸಿತು. ಅಂತಹ ರೋಗಪೀಡಿತ ಸಂದರ್ಭದಲ್ಲಿಯೂ ಭಾರತೀಯರು ತಮ್ಮ ಕೆಚ್ಚನ್ನು ಮರೆತಿಲ್ಲ ಎಂಬುದು ಅವರಿಗೆ ಸ್ಪಷ್ಟವಾಯಿತು.

ಬ್ರಿಟಿಷರೂ ಸುಮ್ಮನೆ ಕೂಡುವವರಲ್ಲ. ಮೂರು ಸಹೋದರರ ಹುಡುಕಾಟಕ್ಕೆ ಸಾಕಷ್ಟು ತಂಡಗಳನ್ನು ರೂಪಿಸಿದರು. ಭಾರತದಲ್ಲಿ ದೇಶಭಕ್ತರಿದ್ದಷ್ಟೇ, ದೇಶದ್ರೋಹಿಗಳೂ ಇದ್ದಾರೆ. ಗಣೇಶ ಶಂಕರ ದ್ರಾವಿಡ ಎಂಬ ವ್ಯಕ್ತಿ, ದಾಮೋದರನ ಬಗ್ಗೆ ಸುಳಿವು ನೀಡಿಬಿಟ್ಟ. ಮಿಂಚಿನಂತೆ ಕಾರ್ಯಾಚರಣೆ ನಡೆಸಿ ಪೊಲೀಸರು ದಾಮೊದರನನ್ನು ಬಂಧಿಸಿಯೇ ಬಿಟ್ಟರು. ನೆಪಕ್ಕೆಂದು ವಿಚಾರಣೆ ನಡೆಸಿ ಗಲ್ಲು ಶಿಕ್ಷೆಯನ್ನು ಘೋಷಿಸಲಾಯಿತು. ದಾಮೋದರ ಚಾಪೇಕರ್ 1898 ರ ಏಪ್ರಿಲ್ 18 ರಂದು ನೇಣಿಗೇರಿ ಹುತಾತ್ಮನಾದ.

ಬಾಲಕೃಷ್ಣ ಜಾಣ್ಮೆಯಿಂದ ನಿಜಾಮನ ಪ್ರಾಂತದೊಳಗೆ ತಲೆಮರೆಸಿಕೊಂಡಿದ್ದರೂ, ಪೊಲೀಸರು ಅವನನ್ನೂ ಬಂಧಿಸಿ ಗಲ್ಲಿಗೇರಿಸಿದರು. ಮೇ 12 – 1899 ರಂದು ಎರಡನೆಯವನೂ ತಾಯಿ ಭಾರತಿಗೆ ಅರ್ಪಿತನಾದ. ಈ ಮಧ್ಯೆ, ದ್ರವಿಡನು ಮಾಡಿದ ಮಿತ್ರದ್ರೋಹದಿಂದ ಕುಪಿತನಾಗಿದ್ದ ಇಪ್ಪತ್ತರ ಹರೆಯದ ಯುವಕ ವಾಸುದೇವ, ಹಾಡುಹಗಲಲ್ಲೇ ದ್ರವಿಡನನ್ನು ಗುಂಡಿಟ್ಟು ಕೊಂದ. ತನ್ಮೂಲಕ ದೇಶದ್ರೋಹ ಮಾಡಿದವರಿಗೆ ಇಂತಹದ್ದೇ ಗತಿ ಕಾದಿರುತ್ತದೆಂಬ ಎಚ್ಚರಿಕೆಯನ್ನೂ ನೀಡಿದ. ವಾಸುದೇವನು ಬಂಧಿತನಾದ ಮೇಲೆ ಅವನಿಗೂ ಮರಣದಂಡನೆಯನ್ನೇ ವಿಧಿಸಲಾಯಿತು. 8 ಮೇ 1899 ರಲ್ಲಿ ಅವನೂ ಗಲ್ಲಿಗೇರಿದ.

ದೇವಸ್ಥಾನದಲ್ಲಿ ಪೂಜೆ ಮಾಡಿಕೊಂಡಿದ್ದ ಒಬ್ಬ ಅರ್ಚಕನ ಮೂವರು ಮಕ್ಕಳು, ತಾಯಿ ಭಾರತಿಯನ್ನು ತಮ್ಮ ರಕ್ತದಿಂದಲೇ ಅರ್ಚಿಸಿಬಿಟ್ಟಿದ್ದರು. ತಮಗಾಗಿ ಅರೆಕ್ಷಣವೂ ಬದುಕದೆ ಇಡೀ ಜೀವನವನ್ನು ದೇಶಕ್ಕಾಗಿ ಸವೆಸಿದ ಆ ತರುಣರು, ನಮ್ಮಂತಹ ಯುವಕರಿಗೆ ಸದಾ ಸ್ಫೂರ್ತಿಯಾಗಿರಲಿ. ಅವರ ಸ್ಮರಣೆ ನಮ್ಮೆದೆಯಲ್ಲಿ ಚಿರಸ್ಥಾಯಿಯಾಗಿರಲಿ... ವಂದೇ ಮಾತರಂ.

**ಭೀಮಸೇನ್ ಪುರೋಹಿತ್, B.E. (MTech)**

# ಚಿತ್ರ ಸುದ್ದಿ




ದಿನಾಂಕ 31–1–2015 ರಂದು ಜಮ್ಮು ಕಾಶ್ಮೀರದ ಕಾಟ್ರಾದಲ್ಲಿ ನಡೆದ ಎಬಿಆರ್‌ಎಸ್‌ಎಂನ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಗಣ್ಯರು




ಜಮ್ಮುವಿನ ಶಾಸಕರಾದ ಶ್ರೀ ನಿರ್ಮಲ್‌ಸಿಂಗ್‌ರವರು, ಸಂಘಟನಾ ಕಾರ್ಯದರ್ಶಿ ಶ್ರೀ ಮಹೇಂದ್ರ ಕಪೂರ್‌ರವರೊಂದಿಗೆ ಸಮಾಲೋಚನೆಯಲ್ಲಿ




ಎಬಿಆರ್‌ಎಸ್‌ಎಂ ಕಾರ್ಯಕಾರಿಣಿ ಸಭೆಯಲ್ಲಿ ಶ್ರೀ ಮಹೇಂದ್ರ ಕಪೂರ್‌ರವರನ್ನು ಸನ್ಮಾನಿಸುತ್ತಿರುವುದು


Registered No. RNI 45459/85
RNP/KA/BGS-125/2015-2017
Posted at Bangalore GPO
Bangalore -560 001

MARCH 2015
Date of Posting
20th or 21st of every month


## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER


Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.


srushtidesigns@gmail.com